		209	ಮಧುಗಿರಿ	0	0	0	0	0	0	0	0	0	0	0	0	0	0	0	0	0	0	0	0	0	0	1	1
		210	ಪಾವಗಡ																								0
		211	ತಿಪಟೂರು	0	0	0	0	0	0	0	0	0	0	0	0	0	0	1	0	0	0	0	0	0	0	0	1
		212	ತುರುವೇಕೆರೆ																								0
		213	ತುಮಕೂರು ಗ್ರಾಮಾಂತರ																								0
		214	ಕುಣಿಗಲ್																								0
		ಒಟ್ಟು		0	0	0	0	2	0	0	1	0	0	0	7	1	1	2	0	1	1	1	2	0	0	-1	18

29)	ಉತ್ತರ ಕನ್ನಡ (ಕಾರವಾರ)	215	ಭಟ್ಕಳ																								0
		216	ಹಳಿಯಾಳ																								
		217	ಕಾರವಾರ	0	0	0	1	1	0	0	1	0	0	0	9	0	0	0	0	1	1	1	2	0	0	1	18
		218	ಕುಮಟಾ	0	0	0	0	0	0	0	0	0	0	0	0	0	0	1	0	0	0	0	0	0	0	1	2
		219	ಸಿರ್ಸಿ	0	0	0	0	0	0	0	0	0	0	0	0	0	0	1	0	0	0	0	0	0	0	1	2
		220	ಯಲ್ಲಾಪೂರ																								0
ಒಟ್ಟು				0	0	0	1	1	0	0	1	0	0	0	9	0	0	2	0	1	1	1	2	0	0	3	22
30)	ಯಾದಗಿರಿ	221	ಗುರುಮಿಟ್ಕಲ್																								0
		222	ಶಹಾಪೂರ																								0
		223	ಸುರಪೂರ																								
		224	ಯಾದಗಿರಿ	0	0	0	1	2	0	0	0	0	0	0	2	0	0	2	0	0	1	1	2	0	0	3	14
ಒಟ್ಟು				0	0	0	1	2	0	0	0	0	0	0	2	0	0	2	0	0	1	1	2	0	0	3	14
ಒಟ್ಟಾರೆ				0	0	2	16	65	0	0	19	0	1	2	148	13	8	48	3	29	20	31	63	8	3	84	563

ಅಪರ ನಿರ್ದೇಶಕರು(ಆಡಳಿತ)

ಕರ್ನಾಟಕ ವಿಧಾನ ಸಭೆ

ಸದಸ್ಯರಾದ ಹೆಸರು	ಶ್ರೀ ಲಿಂಗೇಶ್ ಕೆ.ಎಸ್ (ಬೇಲೂರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	140
ಉತ್ತರಿಸಬೇಕಾದ ದಿನಾಂಕ	29.01.2021
ಉತ್ತರಿಸಬೇಕಾದವರು	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಹಾಸನ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿಗಳು ಹದಗೆಟ್ಟಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ.	ಬಂದಿದ್ದಲ್ಲಿ, ಹಾಸನ ನಗರಸಭಾ ವ್ಯಾಪ್ತಿಯಲ್ಲಿ ಈಗಾಗಲೇ ಹದಗೆಟ್ಟಿರುವ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು);	ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ನಿರ್ದೇಶನದನ್ವಯ, ಹಾಸನ ಜಿಲ್ಲೆಯ ಯಗಚಿ ನದಿಯ ಮಾಲಿನ್ಯವನ್ನು ತಡೆಗಟ್ಟಿ ಪುನರುಜ್ಜೀವನಗೊಳಿಸಲು ಮತ್ತು ಹಾಸನ ನಗರದ ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ರೂ.165.00 ಕೋಟಿಗಳ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 04 ಯುಡಿಎಸ್ 2020, ದಿನಾಂಕ: 06.10.2020 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಟೆಂಡರ್ ಪ್ರಕ್ರಿಯೆ ನಡೆಸಿ, ಗುತ್ತಿಗೆದಾರರನ್ನು ನೇಮಿಸಿದ ನಂತರ 24 ತಿಂಗಳ ಕಾಲಾವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.
ಇ.	ಹಾಸನ ಜಿಲ್ಲೆಯಾದ್ಯಂತ ಶುದ್ಧ ನೀರನ್ನು ಸರಬರಾಜು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು);	**ಹಾಸನ:** 64 ಎಂ.ಎಲ್.ಡಿ ಸಾಮರ್ಥ್ಯದ ಸಗಟು ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ರೂ.117.00 ಕೋಟಿಗಳ ಅಂದಾಜು ಪಟ್ಟಿಗೆ ಅಮೃತ್ ಯೋಜನೆಯಡಿ 2016 ರಲ್ಲಿ ಅನುಮೋದನೆ ದೊರೆತಿದೆ. ಸದರಿ ಯೋಜನೆಯನ್ನು ಮಾರ್ಚ್-2021 ರ ಅಂತ್ಯಕ್ಕೆ ಚಾಲನೆಗೊಳಿಸಲು

		ಉದ್ದೇಶಿಸಲಾಗಿದೆ. ಈಗ ಕಾಮಗಾರಿಗಳು ಪ್ರಗತಿಯಲ್ಲಿವೆ. **ಅರಸೀಕೆರೆ:** ಚನ್ನರಾಯಪಟ್ಟಣದ ಗನ್ನಿಕಡ ಹತ್ತಿರ ಹೇಮಾವತಿ ನದಿಯಿಂದ 21.00 ಎಂ.ಎಲ್.ಡಿ ನೀರು ಸರಬರಾಜು ಮಾಡಲು ರೂ.121.85 ಕೋಟಿಗಳ ಯೋಜನೆಯನ್ನು ಪೂರ್ಣಗೊಳಿಸಿ ನವೆಂಬರ್-2015 ರಲ್ಲಿ ಚಾಲನೆಗೊಳಿಸಲಾಗಿದೆ. **ಬೇಲೂರು:** 9.00 ಎಂ.ಎಲ್.ಡಿ ನೀರನ್ನು ಸರಬರಾಜು ಮಾಡಲು ರೂ.16.90 ಕೋಟಿಗಳ ಯೋಜನೆಯನ್ನು ಪೂರ್ಣಗೊಳಿಸಿ ಮಾರ್ಚ್-2015 ರಲ್ಲಿ ಚಾಲನೆಗೊಳಿಸಲಾಗಿದೆ. **ಚನ್ನರಾಯಪಟ್ಟಣ:** ಹೇಮಾವತಿ ನದಿಯಿಂದ 17.00 ಎಂ.ಎಲ್.ಡಿ ನೀರು ಸರಬರಾಜು ಮಾಡಲು ರೂ.42.72 ಕೋಟಿಗಳ ಯೋಜನೆಯನ್ನು ಪೂರ್ಣಗೊಳಿಸಿ ಅಕ್ಟೋಬರ್-2017 ರಂದು ಚಾಲನೆಗೊಳಿಸಲಾಗಿದೆ. **ಹೊಳೆನರಸೀಪುರ:** ಹೇಮಾವತಿ ನದಿಯಿಂದ 8.5 ಎಂ.ಎಲ್.ಡಿ ನೀರು ಸರಬರಾಜು ಮಾಡುವ ರೂ.61.00 ಕೋಟಿಗಳ ಅಂದಾಜುಪಟ್ಟಿಗೆ ಜೂನ್-2019 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. **ಸಕಲೇಶಪುರ:** ಹೇಮಾವತಿ ನದಿಯಿಂದ 3.62 ಎಂ.ಎಲ್.ಡಿ (2.26 ಎಂ.ಎಲ್.ಡಿ (ಹಳೆ ಯೋಜನೆ) + 1.36 ಎಂ.ಎಲ್.ಡಿ (ಹೊಸ ಯೋಜನೆ)) ನೀರು ಸರಬರಾಜು ಮಾಡಲು ರೂ.7.00 ಕೋಟಿಗಳ ಯೋಜನೆಗೆ 2003-04 ರಲ್ಲಿ ಅನುಮೋದನೆ ನೀಡಲಾಗಿದ್ದು, 2009ರಲ್ಲಿ ಯೋಜನೆಯನ್ನು ಚಾಲನೆಗೊಳಿಸಲಾಗಿದೆ.

		ಆಲೂರು: ಸದರಿ ಪಟ್ಟಣಕ್ಕೆ 1.36 ಎಂ.ಎಲ್.ಡಿ ನೀರು ಸರಬರಾಜು ಮಾಡುವ ರೂ.0.84 ಕೋಟಿಗಳ ಯೋಜನೆಯನ್ನು ಪೂರ್ಣಗೊಳಿಸಿ 2002 ರಲ್ಲಿ ಕಾರ್ಯಗತಗೊಳಿಸಲಾಗಿದೆ. **ಅರಕಲಗೂಡು:** 5 ಎಂ.ಎಲ್.ಡಿ ಕುಡಿಯುವ ನೀರು ಸರಬರಾಜು ಮಾಡಲು ರೂ.10.42 ಕೋಟಿಗಳ ಯೋಜನೆಯನ್ನು ಪೂರ್ಣಗೊಳಿಸಿ ಮಾರ್ಚ್-2013 ರಲ್ಲಿ ಚಾಲನೆಗೊಳಿಸಲಾಗಿದೆ. (ವಿಧಾನಸಭಾ ಕ್ಷೇತ್ರವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ).
ಈ.	ಈ ಜಿಲ್ಲೆಯಾದ್ಯಂತ ಶುದ್ಧ ನೀರನ್ನು ಸರಬರಾಜು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವ ಹಂತದಲ್ಲಿದೆ (ವಿದಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು);	ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ ನಅಇ 15 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ-1

ಕ್ರ.ಸಂ	"ನಗರ / ಪಟ್ಟಣದ ಹೆಸರು "	ಜನಸಂಖ್ಯೆ 2011 ರ ಜನಗಣತಿ ಪ್ರಕಾರ	ಪ್ರಸ್ತುತ ಜನಸಂಖ್ಯೆ ಅಂದಾಜು	ಜಲಮೂಲ	ಪ್ರಸ್ತುತ ಸರಬರಾಜು ಮಾಡುತ್ತಿರುವ ನೀರಿನ ಪ್ರಮಾಣ ಎಂ.ಎಲ್.ಡಿ	ಷರಾ
1	ಹಾಸನ	155006	170000	ಹೇಮಾವತಿ ಜಲಾಶಯ	18.00	* 64 ಎಂ.ಎಲ್.ಡಿ ಸಾಮರ್ಥ್ಯದ ಸಗಟು ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ರೂ.117.00 ಕೋಟಿಗಳ ಅಂದಾಜು ಪಟ್ಟಿಗೆ ಅಮೃತ್ ಯೋಜನೆಯಡಿ 2016 ರಲ್ಲಿ ಅನುಮೋದನೆ ದೊರೆತಿದೆ. ಸದರಿ ಯೋಜನೆಯನ್ನು ಮಾರ್ಚ್-2021 ರ ಅಂತ್ಯಕ್ಕೆ ಚಾಲನೆಗೊಳಿಸಲು ಉದ್ದೇಶಿಸಲಾಗಿದೆ. ಈಗ ಕಾಮಗಾರಿಗಳು ಪ್ರಗತಿಯಲ್ಲಿವೆ. * ಅಮೃತ್ ಯೋಜನೆಯಡಿಯ ಹೆಚ್ಚುವರಿ ಅನುದಾನದಲ್ಲಿ ಹಾಸನ ನಗರ ಪ್ರದೇಶದಲ್ಲಿ 17 ವಾರ್ಡ್ ಗಳಿಗೆ ನೀರು ಸರಬರಾಜು ವಿತರಣಾ ಜಾಲ ಕಲ್ಪಿಸುವ ಮತ್ತು ಮನೆ ಸಂಪರ್ಕಗಳನ್ನು ಕಲ್ಪಿಸುವ ಕಾಮಗಾರಿಯ ಅಂದಾಜುಪಟ್ಟಿ ರೂ.24.38 ಕೋಟಿಗಳಿಗೆ 2016 ರಲ್ಲಿ ಅನುಮೋದನೆ ದೊರೆತಿದೆ. ಸದರಿ ಯೋಜನೆಯನ್ನು ಜನವರಿ-2021 ರ ಅಂತ್ಯಕ್ಕೆ ಪೂರ್ಣಗೊಳಿಸಿ, ಚಾಲನೆಗೊಳಿಸಲು ಉದ್ದೇಶಿಸಲಾಗಿದೆ. ಈಗ ಕಾಮಗಾರಿಗಳು ಪ್ರಗತಿಯಲ್ಲಿವೆ. * ಹಾಸನ ನಗರದಲ್ಲಿ ಬಿಟ್ಟು ಹೋಗಿರುವ 18 ವಾರ್ಡ್ ಗಳಲ್ಲಿ ವಿತರಣಾಜಾಲ ಅಳವಡಿಸುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.142.30 ಕೋಟಿಗಳಿಗೆ ತಯಾರಿಸಿ ಆಡಳಿತಾತ್ಮಕ ಅನುಮೋದನೆಗಾಗಿ ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ:2161 ದಿನಾಂಕ:14.01.2019 ರಂದು ಸಲ್ಲಿಸಲಾಗಿರುತ್ತದೆ.
2	ಅರಸೀಕೆರೆ	45160	60000	ಹೇಮಾವತಿ ನದಿ	12.00	ಚನ್ನರಾಯಪಟ್ಟಣದ ಗನ್ನಿಕಡ ಹತ್ತಿರ ಹೇಮಾವತಿ ನದಿಯಿಂದ 21.00 ಎಂ.ಎಲ್.ಡಿ ನೀರು ಸರಬರಾಜು ಮಾಡಲು ರೂ.121.85 ಕೋಟಿಗಳ ಯೋಜನೆಯನ್ನು ಪೂರ್ಣಗೊಳಿಸಿ ನವೆಂಬರ್-2015 ರಲ್ಲಿ ಚಾಲನೆಗೊಳಿಸಲಾಗಿದೆ.
3	ಬೇಲೂರು	22484	26000	ಯಗಚಿ ಜಲಾಶಯ	5.00	9.00 ಎಂ.ಎಲ್.ಡಿ ನೀರನ್ನು ಸರಬರಾಜು ಮಾಡಲು ರೂ.16.90 ಕೋಟಿಗಳ ಯೋಜನೆಯನ್ನು ಪೂರ್ಣಗೊಳಿಸಿ ಮಾರ್ಚ್-2015 ರಲ್ಲಿ ಚಾಲನೆಗೊಳಿಸಲಾಗಿದೆ.
4	ಚನ್ನರಾಯಪಟ್ಟಣ	40417	47000	ಹೇಮಾವತಿ ನದಿ	10.00	* ಹೇಮಾವತಿ ನದಿಯಿಂದ 17.00 ಎಂ.ಎಲ್.ಡಿ ನೀರು ಸರಬರಾಜು ಮಾಡಲು ರೂ.42.72 ಕೋಟಿಗಳ ಯೋಜನೆಯನ್ನು ಪೂರ್ಣಗೊಳಿಸಿ ಅಕ್ಟೋಬರ್-2017 ರಂದು ಚಾಲನೆಗೊಳಿಸಲಾಗಿದೆ. * ಚನ್ನರಾಯಪಟ್ಟಣದಲ್ಲಿ ಬಿಟ್ಟು ಹೋಗಿರುವ ಪ್ರದೇಶಗಳಲ್ಲಿ ವಿತರಣಾಜಾಲ ಅಳವಡಿಸುವ ಕಾಮಗಾರಿಯ ಅಂದಾಜುಪಟ್ಟಿ ರೂ.25.25 ಕೋಟಿಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ:2431 ದಿನಾಂಕ:22.02.2019 ರೊಳಗೆ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.
5	ಹೊಳೆನರಸೀಪುರ	29974	35000	ಹೇಮಾವತಿ ನದಿ	6.00	ಹೇಮಾವತಿ ನದಿಯಿಂದ 8.5 ಎಂ.ಎಲ್.ಡಿ ನೀರು ಸರಬರಾಜು ಮಾಡುವ ರೂ.61.00 ಕೋಟಿಗಳ ಅಂದಾಜುಪಟ್ಟಿಗೆ ಜೂನ್-2019 ರಲ್ಲಿ ಆಡಳಿತಾತ್ಮಕ ದೊರೆತ್ತಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಯೋಜನೆಯನ್ನು ಮಾರ್ಚ್-2022 ರ ಅಂತ್ಯಕ್ಕೆ ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.

ಕ್ರ.ಸಂ	"ನಗರ / ಪಟ್ಟಣದ ಹೆಸರು "	ಜನಸಂಖ್ಯೆ 2011 ರ ಜನಗಣತಿ ಪ್ರಕಾರ	ಪ್ರಸ್ತುತ ಜನಸಂಖ್ಯೆ ಅಂದಾಜು	ಜಲಮೂಲ	ಪ್ರಸ್ತುತ ಸರಬರಾಜು ಮಾಡುತ್ತಿರುವ ನೀರಿನ ಪ್ರಮಾಣ ಎಂ.ಎಲ್.ಡಿ	ಷರಾ
6	ಸಕಲೇಶಪುರ	23352	27000	ಹೇಮಾವತಿ ನದಿ	3.60	ಹೇಮಾವತಿ ನದಿಯಿಂದ 3.62 ಎಂ.ಎಲ್.ಡಿ (2.26 ಎಂ.ಎಲ್.ಡಿ (ಹಳೆ ಯೋಜನೆ) + 1.36 ಎಂ.ಎಲ್.ಡಿ (ಹೊಸ ಯೋಜನೆ)) ನೀರು ಸರಬರಾಜು ಮಾಡಲು ರೂ.7.00 ಕೋಟಿಗಳ ಯೋಜನೆಗೆ 2003-04 ರಲ್ಲಿ ಅನುಮೋದನೆ ದೊರೆತ್ತಿದ್ದು, 2009 ರಲ್ಲಿ ಯೋಜನೆಯನ್ನು ಚಾಲನೆಗೊಳಿಸಲಾಗಿದೆ.
7	ಆಲೂರು	6541	8000	ಯಗಚಿ ಜಲಾಶಯ	1.25	ಸದರಿ ಪಟ್ಟಣಕ್ಕೆ 1.36 ಎಂ.ಎಲ್.ಡಿ ನೀರು ಸರಬರಾಜು ಮಾಡುವ ರೂ. 0.84 ಕೋಟಿಗಳ ಯೋಜನೆಯನ್ನು ಪೂರ್ಣಗೊಳಿಸಿ 2002 ರಲ್ಲಿ ಕಾರ್ಯಗತಗೊಳಿಸಲಾಗಿದೆ
8	ಅರಕಲಗೂಡು	16810	20000	ಹೇಮಾವತಿ ಜಲಾಶಯ	4.00	5 ಎಂ.ಎಲ್.ಡಿ ಕುಡಿಯುವ ನೀರು ಸರಬರಾಜು ಮಾಡಲು ರೂ.10.42 ಕೋಟಿಗಳ ಯೋಜನೆಯನ್ನು ಪೂರ್ಣಗೊಳಿಸಿ ಮಾರ್ಚ್-2013 ರಲ್ಲಿ ಚಾಲನೆಗೊಳಿಸಲಾಗಿದೆ

53
U/S
29/1/21

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 15 ಯುಎಂಎಸ್ 2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:29-01-2021

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ. ಲಿಂಗೇಶ್ ಕೆ.ಎಸ್. (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 140ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ಲಿಂಗೇಶ್ ಕೆ.ಎಸ್. (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 140ಕ್ಕೆ ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಲತಾ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಎಂ.ಎ-2 & ಮಂಡಳಿ)
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 07 ಎಲ್‌ಎಕ್ಯೂ 2021.

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:29/01/2021.

03
29/1/2021

ಇವರಿಂದ
ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಇವರಿಗೆ
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನ ಸೌಧ, ಬೆಂಗಳೂರು

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ) ರವರ ಪ್ರಶ್ನೆ ಸಂಖ್ಯೆ 67 ಕ್ಕೆ ಉತ್ತರಿಸುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 67 ಕ್ಕೆ ಸಂಬಂಧಿಸಿದಂತೆ ಉತ್ತರದ 25 ಪ್ರತಿಗಳನ್ನು ಹಾಗೂ Soft Copy ಯನ್ನು email ID: questionskla@karnataka.gov.in ಇಲ್ಲಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

A Vijayakumar
29.01.2021
(ಎ ವಿಜಯ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಎಂಎ–1&3)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	67
ಸದಸ್ಯರ ಹೆಸರು	:	ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ)
ಉತ್ತರಿಸುವ ದಿನಾಂಕ	:	29/01/2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಮೇಲ್ದರ್ಜೆಗೇರಿಸಿದ ಪಟ್ಟಣ ಪಂಚಾಯಿತಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು)	2011ರ ಜನಗಣತಿಯನುಸಾರ ರಾಜ್ಯದಲ್ಲಿ ಒಟ್ಟು 53 ಪಟ್ಟಣ ಪಂಚಾಯತಿಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ (ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ)
ಆ)	ಸದರಿ ಪಟ್ಟಣ ಪಂಚಾಯಿತಿಗಳಿಗೆ ನೀಡಲಾದ ಮೂಲ ಸೌಕರ್ಯಗಳಾವುವು;	**1. ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆ :-** ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆಯಡಿ ಮೇಲ್ದರ್ಜೆಗೇರಿಸಿದ ಒಟ್ಟು 40 ಪಟ್ಟಣ ಪಂಚಾಯಿತಿಗಳಿಗೆ ತಲಾ ರೂ.5.00 ಕೋಟಿಗಳಂತೆ ಮೊತ್ತವನ್ನು ಹಂಚಿಕೆ ಮಾಡಲಾಗಿರುತ್ತದೆ. ಸದರಿ ಯೋಜನೆಯ ಮಾರ್ಗಸೂಚಿಯಂತೆ ಹಂಚಿಕೆಯಾದ ಮೊತ್ತದಲ್ಲಿ ಮೂಲ ಸೌಕರ್ಯಗಳಾದ ಕುಡಿಯುವ ನೀರಿನಕಾಮಗಾರಿ, ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆಗಳಿಗೆ ನೀಡಬೇಕಾಗಿರುವ ಸ್ಥಳೀಯ ಸಂಸ್ಥೆ ವಂತಿಕೆ, ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ಪುಟ್‌ಪಾತ್ ನಿರ್ಮಾಣ, ಸಂಚಾರಿ ವ್ಯವಸ್ಥೆ ನಿರ್ವಹಣೆ, ಮಳೆ ನೀರುಚರಂಡಿ, ಕಛೇರಿಕಟ್ಟಡ ನಿರ್ಮಾಣ, ಸಮುದಾಯ ಹಾಗೂ ಸಾರ್ವಜನಿಕ ಶೌಚಾಲಯ ನಿರ್ಮಾಣ, ಆಧುನಿಕ ಬಸ್ ನಿಲ್ದಾಣ, ಮಾರುಕಟ್ಟೆ ಸಂಕೀರ್ಣ, ಗಂಥಾಲಯ ಕಟ್ಟಡ, ಅಂಗನವಾಡಿಕಟ್ಟಡ, ಉದ್ಯಾನವನ, ಆಧುನಿಕಆಟದ ಮೈದಾನ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆಯಡಿ ಹಂಚಿಕೆ ಮಾಡಲಾದ ಪಟ್ಟಣ ಪಂಚಾಯಿತಿಗಳ ವಿವರಗಳನ್ನು ಅನುಬಂಧ-2ರಲ್ಲಿ ವಿವರಿಸಲಾಗಿದೆ.
		2. ಸ್ವಚ್ಛ ಭಾರತ ಯೋಜನೆ :- ಸ್ವಚ್ಛ ಭಾರತ ಯೋಜನೆಯಡಿ ರಾಜ್ಯದಲ್ಲಿ ಮೇಲ್ದರ್ಜೆಗೇರಿದ ಪಟ್ಟಣ ಪಂಚಾಯತಿಗೆ ವೈಯಕ್ತಿಕ, ಸಮುದಾಯ, ಸಾರ್ವಜನಿಕ ಶೌಚಾಯಗಳ ನಿರ್ಮಾಣ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದ ವಾಹನ ಯಂತ್ರೋಪಕರಣಗಳ ಖರೀದಿ ಹಾಗು ಸಿವಿಲ್ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರೂ.17.19 ಕೋಟಿಗಳ ಅನುದಾನವನ್ನು ಎಸ್.ಬಿ.ಎಂ ಅಡಿ ಒದಗಿಸಲಾಗಿರುತ್ತದೆ.

		3. 14ನೇ ಹಣಕಾಸು ಆಯೋಗದ ಅನುದಾನ :- ಸರ್ಕಾರದ ಸುತ್ತೋಲೆ ಸಂಖ್ಯೆ **ನಅಇ 42 ಎಸ್.ಎಫ್.ಸಿ 2017 ದಿನಾಂಕ.03.04.2017** ರಲ್ಲಿ14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ ಬಳಕೆ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಸದರಿ ಮಾರ್ಗಸೂಚಿಯನ್ವಯ ಕುಡಿಯುವ ನೀರು ಸರಬರಾಜು ಹಾಗೂ ಸಾಮೂಹಿಕ/ಸಾರ್ವಜನಿಕ ಶೌಚಾಲಯ ಮತ್ತು ಸೆಪ್ಟೇಜ್‌ಗಳ ನಿರ್ವಹಣೆಗೆ ಸಂಬಂಧಪಟ್ಟಂತೆ ಪಟ್ಟಣಗಳ ಅವಶ್ಯಕತೆಗನುಗುಣವಾಗಿ ಆಯಾ ಸಾಲಿನಲ್ಲಿ ಹಂಚಿಕೆಯಾದ ಗರಿಷ್ಠ ಮೊತ್ತವನ್ನು ಬಳಸಲು ಕ್ರಮವಹಿಸಲಾಗುವುದು ಉಳಿದಂತೆ ಒಳಚರಂಡಿ ವ್ಯವಸ್ಥೆ, ಘನತ್ಯಾಜ್ಯ ವಸ್ತು ನಿರ್ವಹಣೆ, ಮಳೆ ನೀರು ಚರಂಡಿ, ಸಮುದಾಯ ಆಸ್ತಿಗಳ ನಿರ್ವಹಣೆ (ಉದ್ಯಾನವನ ಒಳಗೊಂಡಂತೆ), ರಸ್ತೆ ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ, ವಿದ್ಯುತ್ ಬೀದಿದೀಪಗಳ ಅಳವಡಿಕೆ/ನಿರ್ವಹಣೆ/ವಿದ್ಯುತ್ ಉಳಿತಾಯ ಕ್ರಮಗಳುಸ್ಮಶಾನ/ ಚಿತಾಗಾರಗಳ ನಿರ್ವಹಣೆಗೆ ಸಂಬಂಧಪಟ್ಟಂತೆ ಹಂಚಿಕೆಯಾದ ಅನುದಾನದಲ್ಲಿ ಗರಿಷ್ಠ 40 ರಷ್ಟು ಮೀರದಂತೆ ಆಯಾ ಸಾಲಿನಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು. (ಸುತ್ತೋಲೆ ಲಗತ್ತಿಸಲಾಗಿದೆ)
		4. 15ನೇ ಹಣಕಾಸುಆಯೋಗದಅನುದಾನ :- 2020-21ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನವನ್ನು 2 ಭಾಗವಾಗಿ ವಿಂಗಡಿಸಿದ್ದು, ಶೇ.50ರಷ್ಟು ಅನುದಾನ ನಿರ್ಬಂಧಿತ ಅನುದಾನವಾಗಿದ್ದು, ಸದರಿ ಅನುದಾನವನ್ನು ಸಮಾನವಾಗಿ ಕುಡಿಯುವ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗೆ ಕಡ್ಡಾಯವಾಗಿ ಬಳಸಲು ಮಾರ್ಗಸೂಚಿಯಲ್ಲಿ ಸೂಚಿಸಲಾಗಿದೆ. ಉಳಿದ ಶೇ.50ರಷ್ಟು ಅನುದಾನವು ಮುಕ್ತ ಅನುದಾನವಾಗಿದ್ದು ಸದರಿ ಅನುದಾನದಲ್ಲಿ ಈ ಕೆಳಕಂಡ ಮೂಲಭೂತ ಸೌಕರ್ಯಗಳಿಗೆ ಹಂಚಿಕೆಯಾದ ಮುಕ್ತ ಅನುದಾನದ ಗರಿಷ್ಠ ಶೇ.20 ರಷ್ಟು ಮೀರದಂತೆ ಬಳಸಲು ಸೂಚಿಸಲಾಗಿದೆ. 1) ನೈರ್ಮಲ್ಯ ಮತ್ತು ಸೆಪ್ಟೇಜ್ ನಿರ್ವಹಣೆ 2) ಒಳಚರಂಡಿ ವ್ಯವಸ್ಥೆಯ ಕಾಮಗಾರಿಗಳು 3) ಮಳೆ ನೀರುಚರಂಡಿ 4) ರಸ್ತೆ ಮತ್ತು ಪಾದಾಚಾರಿ ಮಾರ್ಗ 5) ಬೀದಿ ದೀಪ / ವಿದ್ಯುತ್ ಉಳಿತಾಯ ಕ್ರಮಗಳು 6) ಉದ್ಯಾನವನ ಮತ್ತು ಹಸಿರು ಜಾಗಅಭಿವೃದ್ಧಿ ಮತ್ತು 7) ಸ್ಮಶಾನ / ಚಿತಾಗಾರ
		5. ಎಸ್.ಎಫ್.ಸಿ ಮುಕ್ತನಿಧಿ ಅನುದಾನ :- ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು 1) ಕುಡಿಯುವ ನೀರು 2) ತರಕಾರಿ ಮಾರುಕಟ್ಟೆ 3)ಮಾಂಸ, ಕೋಳಿ ಹಾಗೂ ಮೀನು ಮಾರುಕಟ್ಟೆ 4)ಸಣ್ಣ ಪ್ರಮಾಣದ ಮಾರುಕಟ್ಟೆ ನಿರ್ಮಾಣ 5)ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡುವುದು 6)ಸ್ಮಶಾನಅಭಿವೃದ್ಧಿ 7)ಆಂತರಿಕ ರಸ್ತೆಗಳ ಮತ್ತು ಚರಂಡಿಗಳ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.

		6. ಎಸ್.ಎಫ್.ಸಿಕುಡಿಯುವ ನೀರು :- ಎಸ್.ಎಫ್.ಸಿ ಕುಡಿಯವ ನೀರುಯೋಜನೆಯಡಿ 1)ಕೊಳವೆ ಬಾವಿಗಳನ್ನು ಆಳಗೊಳಿಸುವುದು/ಸ್ವಚ್ಛಗೊಳಿಸುವುದು 2)ಹೈಡ್ರೋಫ್ಯಾಕ್ಚರಿಂಗ್ 3)ನೀರು ಸರಬರಾಜು ಪೈಪುಗಳ ದುರಸ್ಥಿ/ ಬದಲಾವಣೆ 4)ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಹಾಗೂ ಪಂಪು ಮೋಟಾರ್ ಅಳವಡಿಸುವ ಕಾಮಗಾರಿ 5)ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ಅವಶ್ಯವಿರುವ ಪಂಪು ಮೋಟಾರ್, ಪೈಪ್ ಲೈನ್ ಮತ್ತುಇತರೆ ಸಲಕರಣೆಗಳ ಸಂಗ್ರಹಣೆ ಮೊದಲಾದ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತದೆ.
		7. ಎಸ್.ಎಫ್.ಸಿ ವಿಶೇಷ ಅನುದಾನ :- ಎಸ್.ಎಫ್.ಸಿ ವಿಶೇಷ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳ ವಿವೇಚನಾನುಸಾರ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುತ್ತದೆ.
ಇ)	ಮೇಲ್ದರ್ಜೆಗೇರಿಸಿದ ಪಟ್ಟಣ ಪಂಚಾಯಿತಿಗಳಲ್ಲಿ ಸ್ವಂತಕಟ್ಟಡಇಲ್ಲದೇಇರುವಂತಹ ಪ್ರಕರಣಗಳೆಷ್ಟು	ರಾಜ್ಯದಲ್ಲಿ ಮೇಲ್ದರ್ಜೆಗೇರಿಸಿದ ಪಟ್ಟಣ ಪಂಚಾಯತಿಗಳಲ್ಲಿ ಸ್ವಂತ ಕಟ್ಟಡ ಇಲ್ಲದೇ ಇರುವಂತಹ ಪ್ರಕರಣಗಳು–ಒಟ್ಟು 15 (ಅನುಬಂಧ–3 ರಲ್ಲಿ ವಿವರಿಸಲಾಗಿದೆ).
ಈ)	ಸದರಿ ಪಟ್ಟಣ ಪಂಚಾಯಿತಿಗಳಿಗೆ ಪೂರ್ಣ ಪ್ರಮಾಣದ ಸಿಬ್ಬಂದಿಗಳನ್ನು ನೀಡಲಾಗಿದೆಯೇ;	ವೃಂದ ಮತ್ತು ನೇಮಕಾತಿ ನಿಯಮಾವಳಿಯ ರೀತ್ಯಾ ಒಂದು ಪಟ್ಟಣ ಪಂಚಾಯಿತಿಗೆ ವಿವಿಧ ವೃಂದದ 40 ಹುದ್ದೆಗಳಂತೆ, ಮೇಲ್ದರ್ಜೆಗೇರಿಸಲಾದ 53 ಪಟ್ಟಣ ಪಂಚಾಯಿತಿಗಳಲ್ಲಿ ಒಟ್ಟು 2120 ಹುದ್ದೆಗಳು ಮಂಜೂರಾಗಿರುತ್ತದೆ. ಸದರಿ ಹುದ್ದೆಗಳ ಎದುರಾಗಿ ಖಾಯಂ 620 ಅಧಿಕಾರಿ/ನೌಕರರು ಹಾಗೂ 612 ನೌಕರರು ಗುತ್ತಿಗೆ/ಹೊರ ಗುತ್ತಿಗೆ/ ನೇರ ಪಾವತಿ ಅಡಿಯಲ್ಲಿ ಒಟ್ಟು 1232 ಅಧಿಕಾರಿ/ನೌಕರರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. 888 ಹುದ್ದೆಗಳು ಖಾಲಿ ಇರುತ್ತದೆ.
ಉ)	ಯಲಬುರ್ಗಾ ವಿಧಾನಸಭಾಕ್ಷೇತ್ರದಕುಕನೂರು ಪಟ್ಟಣ ಪಂಚಾಯತಿಗೆ ಸ್ವಂತಕಟ್ಟಡವನ್ನುಒದಗಿಸುವ ಪ್ರಕ್ರಿಯೆಯಾವ ಹಂತದಲ್ಲಿದೆ?	ಜಿಲ್ಲಾಧಿಕಾರಿಗಳು, ಕೊಪ್ಪಳ ರವರ ಪತ್ರದ ಸಂಖ್ಯೆ:12302/ಡಿಸಿಕೆ/03/ಎಂ.ಐ.ಎಸ್.ಸಿ/2013 ದಿನಾಂಕ:11.11.2015 ರಲ್ಲಿ ಕುಕನೂರು ಪಟ್ಟಣ ಪಂಚಾಯಿತಿಗೆ ಸ್ವಂತ ಕಟ್ಟಡ ಒದಗಿಸುವಂತೆ ಕೋರಿರುವ ಪ್ರಸ್ತಾವನೆಯನ್ನು ಸರ್ಕಾರದ ಪತ್ರ ಸಂಖ್ಯೆ: ನಅಇ 264 ಎಸ್ಎಫ್ಸಿ 2015, ದಿನಾಂಕ 14/01/2016ರಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಗೆ ಕಳುಹಿಸಲಾಗಿದ್ದು, ಈ ಬಗ್ಗೆ ಪ್ರಸ್ತಾವನೆ ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 07 ಎಲ್ಎಕ್ಯೂ 2021

(ಎನ್. ನಾಗರಾಜು ಎಂ.ಟಿ.ಬಿ.)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಅನುಬಂಧ-1

2011 ರ ಜನಗಣತಿಯನುಸಾರ ಗ್ರಾಮಪಂಚಾಯಿತಿಗಳಿಂದ ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಲಾದ ಪಟ್ಟಿ

ಕ್ರ ಸಂ	ಜಿಲ್ಲೆ	ಗ್ರಾಮ	ಅಧಿಸೂಚನೆ ಸಂಖ್ಯೆ	ದಿನಾಂಕ	ಮೇಲ್ದರ್ಜೆಗೇರಿ ಸಲಾದ ವಿವರ
1	ಬೆಳಗಾವಿ	ಕಂಕನವಾಡಿ	ನಅಇ 53 ಎಂಎಲ್ಆರ್ 2015	22.06.2015	ಪ.ಪಂಚಾಯಿತಿ
2		ಎಂ.ಕೆ.ಹುಬ್ಬಳ್ಳಿ	ನಅಇ 47 ಎಂಎಲ್ಆರ್ 2015	23.06.2015	ಪ.ಪಂಚಾಯಿತಿ
3		ನಾಗನೂರ	ನಅಇ 55 ಎಂಎಲ್ಆರ್ 2015	24.06.2015	ಪ.ಪಂಚಾಯಿತಿ
4		ಚಿಂಚಲಿ	ನಅಇ 61 ಎಂಎಲ್ಆರ್ 2015	20.06.2015	ಪ.ಪಂಚಾಯಿತಿ
5		ಮಲ್ಲಾಪುರ ಪಿ.ಜಿ.	ನಅಇ 63 ಎಂಎಲ್ಆರ್ 2015	23.06.2015	ಪ.ಪಂಚಾಯಿತಿ
6		ಯಕ್ಸಾಂಬ	ನಅಇ 65 ಎಂಎಲ್ಆರ್ 2015	22.06.2015	ಪ.ಪಂಚಾಯಿತಿ
7		ಚನ್ನಮ್ಮನ ಕಿತ್ತೂರು	ನಅಇ 67 ಎಂಎಲ್ಆರ್ 2015	23.06.2015	ಪ.ಪಂಚಾಯಿತಿ
8		ಕಲ್ಲೋಳಿ	ನಅಇ 68 ಎಂಎಲ್ಆರ್ 2015	23.06.2015	ಪ.ಪಂಚಾಯಿತಿ
9		ಖಾನಾಪುರ	ನಅಇ 72 ಎಂಎಲ್ಆರ್ 2015	20.06.2015	ಪ.ಪಂಚಾಯಿತಿ
10		ಶೇಡಬಾಳ	ನಅಇ 74 ಎಂಎಲ್ಆರ್ 2015	22.06.2015	ಪ.ಪಂಚಾಯಿತಿ
11		ಕಬ್ಬೂರ	ನಅಇ 85 ಎಂಎಲ್ಆರ್ 2015	07.07.2015	ಪ.ಪಂಚಾಯಿತಿ
12		ಅರಂಭಾವಿ	ನಅಇ 35 ಎಂಎಲ್ಆರ್ 2015	03.10.2015	ಪ.ಪಂಚಾಯಿತಿ
13		ಬೋರಗಾಂವ	ನಅಇ 66 ಎಂಎಲ್ಆರ್ 2015	05.10.2015	ಪ.ಪಂಚಾಯಿತಿ
14	ವಿಜಯಪುರ	ಆಲಮೇಲ	ನಅಇ 41 ಎಂಎಲ್ಆರ್ 2015	25.06.2015	ಪ.ಪಂಚಾಯಿತಿ
15		ಕೋಲ್ಹಾರ	ನಅಇ 45 ಎಂಎಲ್ಆರ್ 2015	24.06.2015	ಪ.ಪಂಚಾಯಿತಿ
16		ನಾಲತವಾಡ	ನಅಇ 36 ಎಂಎಲ್ಆರ್ 2015	23.06.2015	ಪ.ಪಂಚಾಯಿತಿ
17		ನಿಡಗುಂದಿ	ನಅಇ 38 ಎಂಎಲ್ಆರ್ 2015	22.06.2015	ಪ.ಪಂಚಾಯಿತಿ
18		ದೇವರಹಿಪ್ಪರಗಿ	ನಅಇ 39 ಎಂಎಲ್ಆರ್ 2015	22.06.2015	ಪ.ಪಂಚಾಯಿತಿ
19		ಚಡಚಣ	ನಅಇ 40 ಎಂಎಲ್ಆರ್ 2015	24.06.2015	ಪ.ಪಂಚಾಯಿತಿ
20		ಮನಗೂಳಿ	ನಅಇ 44 ಎಂಎಲ್ಆರ್ 2015	22.06.2015	ಪ.ಪಂಚಾಯಿತಿ,
21		ತಿಕೋಟಾ	ನಅಇ 05 ಎಂಎಲ್ಆರ್ 2018	05.06.2020	ಪ.ಪಂಚಾಯಿತಿ
22	ಬಳ್ಳಾರಿ	ಮರಿಯಮ್ಮನಹಳ್ಳಿ	ನಅಇ 37 ಎಂಎಲ್ಆರ್ 2015	24.06.2015	ಪ.ಪಂಚಾಯಿತಿ
23		ಕುಡುತಿನಿ	ನಅಇ 43 ಎಂಎಲ್ಆರ್ 2015	22.06.2015	ಪ.ಪಂಚಾಯಿತಿ
24	ರಾಯಚೂರು	ಕವಿತಾಳ	ನಅಇ 54 ಎಂಎಲ್ಆರ್ 2015	20.06.2015	ಪ.ಪಂಚಾಯಿತಿ
25		ತುರುವಿಹಾಳ	ನಅಇ 59 ಎಂಎಲ್ಆರ್ 2015	23.06.2015	ಪ.ಪಂಚಾಯಿತಿ
26		ಬಳಗಾನೂರು	ನಅಇ 60 ಎಂಎಲ್ಆರ್ 2015	23.06.2015	ಪ.ಪಂಚಾಯಿತಿ
27		ಸಿರವಾರ	ನಅಇ 50 ಎಂಎಲ್ಆರ್ 2015	23.06.2015	ಪ.ಪಂಚಾಯಿತಿ
28	ಕೊಪ್ಪಳ	ಕನಕಗಿರಿ	ನಅಇ 58 ಎಂಎಲ್ಆರ್ 2015	24.06.2015	ಪ.ಪಂಚಾಯಿತಿ
29		ಕುಕನೂರು	ನಅಇ 56 ಎಂಎಲ್ಆರ್ 2015	05.08.2015	ಪ.ಪಂಚಾಯಿತಿ
30		ತಾವರಗೇರಾ	ನಅಇ 16 ಎಂಎಲ್ಆರ್ 2015	10.08.2015	ಪ.ಪಂಚಾಯಿತಿ
31		ಭಾಗ್ಯನಗರ	ನಅಇ 57 ಎಂಎಲ್ಆರ್ 2015	08.10.2015	ಪ.ಪಂಚಾಯಿತಿ
32	ಬಾಗಲಕೋಟೆ	ಅಮೀನಗಡ	ನಅಇ 52 ಎಂಎಲ್ಆರ್ 2015	25.06.2015	ಪ.ಪಂಚಾಯಿತಿ
33		ಬೆಳಗಲಿ	ನಅಇ 49 ಎಂಎಲ್ಆರ್ 2015	25.06.2015	ಪ.ಪಂಚಾಯಿತಿ
34		ಕಮತಗಿ	ನಅಇ 46 ಎಂಎಲ್ಆರ್ 2015	24.06.2015	ಪ.ಪಂಚಾಯಿತಿ
35		ಲೋಕಾಪುರ	ನಅಇ 06 ಎಂಎಲ್ಆರ್ 2020	31.12.2020	ಪ.ಪಂಚಾಯಿತಿ
36	ದಕ್ಷಿಣಕನ್ನಡ	ವಿಟ್ಲ	ನಅಇ 71 ಎಂಎಲ್ಆರ್ 2015	24.06.2015	ಪ.ಪಂಚಾಯಿತಿ
37		ಕೋಟಕಾರಂ	ನಅಇ 75 ಎಂಎಲ್ಆರ್ 2015	22.06.2015	ಪ.ಪಂಚಾಯಿತಿ
38		ಕಡಬ	ನಅಇ 44 ಎಂಎಲ್ಆರ್ 2018	18.03.2020	ಪ.ಪಂಚಾಯಿತಿ
39	ಉತ್ತರಕನ್ನಡ	ಜಾಲಿ	ನಅಇ 82 ಎಂಎಲ್ಆರ್ 2015	05.08.2015	ಪ.ಪಂಚಾಯಿತಿ
40	ಹಾವೇರಿ	ಗುತ್ತಲ	ನಅಇ 69 ಎಂಎಲ್ಆರ್ 2015	23.06.2015	ಪ.ಪಂಚಾಯಿತಿ
41		ರಟ್ಟಿಹಳ್ಳಿ	ನಅಇ 39 ಎಂಎಲ್ಆರ್ 2017	12.02.2020	ಪ.ಪಂಚಾಯಿತಿ
42	ಚಿತ್ರದುರ್ಗ	ನಾಯಕನಹಟ್ಟಿ	ನಅಇ 73 ಎಂಎಲ್ಆರ್ 2015	24.06.2015	ಪ.ಪಂಚಾಯಿತಿ
43	ಮಂಡ್ಯ	ಬೆಳ್ಳೂರು	ನಅಇ 116 ಎಂಎಲ್ಆರ್ 2016	30.11.2017	ಪ.ಪಂಚಾಯಿತಿ
44	ರಾಯಚೂರು	ಹಟ್ಟಿ	ನಅಇ 138 ಎಂಎಲ್ಆರ್ 2015	04.12.2017	ಪ.ಪಂಚಾಯಿತಿ
45	ತುಮಕೂರು	ಹುಳಿಯಾರು	ನಅಇ 159 ಎಂಎಲ್ಆರ್ 2015	23.02.2018	ಪ.ಪಂಚಾಯಿತಿ

46	ಬೆಂಗಳೂರು ನಗರ	ದೊಡ್ಡತೋಗೂರು	ನಅಇ 90 ಎಂಎಲ್ಆರ್ 2018	26.03.2018	ಪ.ಪಂಚಾಯಿತಿ
47	ಕಲಬುರಗಿ	ಕಾಳಗಿ	ನಅಇ 136 ಎಂಎಲ್ಆರ್ 2016	10.01.2019	ಪ.ಪಂಚಾಯಿತಿ
48		ಕಮಲಾಪೂರ	ನಅಇ 60 ಎಂಎಲ್ಆರ್ 2018	05.06.2020	ಪ.ಪಂಚಾಯಿತಿ
49		ಯಡ್ರಾಮಿ	ನಅಇ 04 ಎಂಎಲ್ಆರ್ 2015	05.11.2020	ಪ.ಪಂಚಾಯಿ
50	ಯಾದಗಿರಿ	ಹುಣಸಗಿ	ನಅಇ 58 ಎಂಎಲ್ಆರ್ 2015	12.02.2020	ಪ.ಪಂಚಾಯಿತಿ
51	ಚಿಕ್ಕಮಗಳೂರು	ಅಜ್ಜಂಪುರ	ನಅಇ 67 ಎಂಎಲ್ಆರ್ 2017	13.04.2020	ಪ.ಪಂಚಾಯತಿ
52	ಉಡುಪಿ	ಬೈಂದೂರು	ನಅಇ 06 ಎಂಎಲ್ಆರ್ 2019	14.08.2020	ಪ.ಪಂಚಾಯತಿ
53	ದಾವಣಗೆರೆ	ನ್ಯಾಮತಿ	ನಅಇ 04 ಎಂಎಲ್ಆರ್ 2018	20.11.2020	ಪ.ಪಂಚಾಯಿತಿ

ಷರಾ: ಬೆಂಗಳೂರು ನಗರ ಜಿಲ್ಲೆಯ ದೊಡ್ಡತೋಗೂರು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಿದ ಅಧಿಸೂಚನೆಗೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ತಡೆಯಾಜ್ಞೆ ಇರುತ್ತದೆ.

Anitha 27/01

ಜಂಟಿ ನಿರ್ದೇಶಕರು (2)
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಅನುಬಂಧ-D2

ಮೇಲ್ದರ್ಜೆಗೇರಿಸಿದ ಪಟ್ಟಣ ಪಂಚಾಯಿತಿಗಳಿಗೆ ನಗರೋತ್ಥಾನ (ಮುನಿಸಿಪಾಲಿಟಿ)-3 ರಡಿ ಹಂಚಿಕೆಯಾದ ಅನುದಾನದ ವಿವರ

(ರೂ. ಕೋಟಿಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆಯಾದ ಅನುದಾನ
1	ಚಿತ್ರದುರ್ಗ	ನಾಯಕನಹಟ್ಟಿ	5.00
2	ದಕ್ಷಿಣ ಕನ್ನಡ	ಕೋಟೆಕಾರು	5.00
3		ವಿಟ್ಲ	5.00
4	ಮಂಡ್ಯ	ಬೆಳ್ಳೂರು	5.00
5	ಹಾವೇರಿ	ಗುತ್ತಲ	5.00
6	ಉತ್ತರ ಕನ್ನಡ	ಜಾಲಿ	5.00
7	ಬೆಳಗಾವಿ	ಐನಾಪುರ	5.00
8		ಶೇಡಬಾಳ	5.00
9		ಬೋರಾಂಗಾವ	5.00
10		ಯಕ್ಸಂಬಾ	5.00
11		ಮಲ್ಲಾಪುರ ಪಿ.ಜಿ	5.00
12		ನಗನೂರು	5.00
13		ಚಿಂಚಲಿ	5.00
14		ಕಂಕನವಾಡಿ	5.00
15		ಚನ್ನಮ್ಮ ಕಿತ್ತೂರು	5.00
16		ಕಲ್ಲೋಳಿ	5.00
17		ಎಂ.ಕೆ.ಹುಬ್ಬಳ್ಳಿ	5.00
18		ಕಬ್ಬೂರು	5.00
19		ಅರಬಾವಿ	5.00
20	ಬಾಗಲಕೋಟೆ	ಬೆಳಗಲಿ	5.00
21		ಅಮೀನಗಡ	5.00
22		ಕಮಟಗಿ	5.00
23	ವಿಜಯಪುರ	ಅಲಮೇಲ	5.00
24		ದೇವರ ಹಿಪ್ಪರಗಿ	5.00
25		ಕೋಲ್ಹಾರ	5.00
26		ನಿಡಗುಂದಿ	5.00
27		ಮನಗೂಳಿ	5.00
28		ಚಡಚಣ	5.00
29		ನಾಲತವಾಡ	5.00
30	ರಾಯಚೂರು	ಸಿರವಾರ	5.00
31		ಕವಿತಾಳ	5.00
32		ತುರುವಿಹಾಳ	5.00
33		ಹಟ್ಟಿ	5.00
34		ಬಳಗನೂರು	5.00
35	ಬಳ್ಳಾರಿ	ಮರಿಯಮ್ಮನಹಳ್ಳಿ	5.00
36		ಕುಡಿತಿನಿ	5.00
37	ಕೊಪ್ಪಳ	ತಾವರಗೇರ	5.00
38		ಭಾಗ್ಯನಗರ	5.00
39		ಕೂಕನೂರ	5.00
40		ಕನಕಗಿರಿ	5.00
		ಒಟ್ಟು	**200.00**

ಮುಖ್ಯ ಅಭಿಯಂತರರು,
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 42 ಎಸ್‌ಎಫ್‌ಸಿ 2017.

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:03-04-2017.

ಸುತ್ತೋಲೆ

ವಿಷಯ:- 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ ಬಳಕೆ ಕುರಿತು ಹಾಲಿ ಇರುವ ಮಾರ್ಗಸೂಚಿಗಳನ್ನು ಮಾರ್ಪಡಿಸುವ ಬಗ್ಗೆ.

ಉಲ್ಲೇಖ:-
1) ಭಾರತ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 01 ಎಫ್‌ಸಿಸಿ 2016, ದಿನಾಂಕ:23-01-2016ರ ಜೊತೆಗೆ ಲಗತ್ತಿಸಿರುವ ಅನುಬಂಧದ ಕ್ರಮ ಸಂಖ್ಯೆ 7.
2) ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 58 ಎಸ್‌ಎಫ್‌ಸಿ 2016, ದಿನಾಂಕ:24-03-2016.
3) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: 10051/ ಡಿಎಂಎಂಎ/ 3/ ಜಿಯುಡಿ/ 2014-15, ದಿನಾಂಕ: 25-02-2017.

~~*

14ನೇ ಹಣಕಾಸು ಆಯೋಗದ ಉಲ್ಲೇಖ (1)ರ ಶಿಫಾರಸ್ಸಿನನ್ವಯ ಅನುದಾನ ಮರು ಹಂಚಿಕೆ ಮತ್ತು ಬಳಕೆ ಕುರಿತಂತೆ ಮಾರ್ಗಸೂಚಿಗಳನ್ನು ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯಲ್ಲಿ ನಿಗದಿಪಡಿಸಿ ನೀಡಲಾಗಿತ್ತು. ಆದರೆ, ಉಲ್ಲೇಖ (2)ರ ಸುತ್ತೋಲೆಯಲ್ಲಿ ವಿವಿಧ ಉದ್ದೇಶಗಳಿಗೆ ನಿಗಧಿಪಡಿಸಿರುವ ಶೇಕಡವಾರು ಅನುದಾನದ ಪ್ರಮಾಣ ಕಡಿಮೆ ಇರುವುದರಿಂದ ಅನಿವಾರ್ಯವಾಗಿ ಆದ್ಯತೆ ಇಲ್ಲದ ಕಾರ್ಯಕ್ರಮಗಳಿಗೆ ಹಣ ನಿಗಧಿಪಡಿಸಿ ಅನುದಾನದ ಬಳಕೆಯಲ್ಲಿ ನಿಧಾನಗತಿ ಉಂಟಾಗುತ್ತಿರುವುದನ್ನು ಗಮನಿಸಲಾಗಿದೆ. ಜೊತೆಗೆ ಉಲ್ಲೇಖ(3)ರಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರು ನೀಡಿದ ಅಭಿಪ್ರಾಯವನ್ನು ಪರಿಗಣಿಸಿ, ಅನುದಾನ ಬಳಕೆಯನ್ನು ಸ್ಥಳೀಯ ಆದ್ಯತೆ ಮತ್ತು ಅವಶ್ಯಕತೆಗೆ ಅನುಸಾರವಾಗಿ ಸಮರ್ಪಕ ಬಳಕೆ ಮಾಡಲು ಅನುಕೂಲವಾಗುವಂತೆ ಮಾರ್ಪಡಿಸುವುದು ಅಗತ್ಯವೆಂದು ಗಮನಿಸಲಾಗಿದೆ.

ಆದ್ದರಿಂದ, 14ನೇ ಹಣಕಾಸು ಆಯೋಗದ ಅನುದಾನದ ಬಳಕೆ ಕುರಿತು ವಿವಿಧ ಉದ್ದೇಶಗಳಿಗೆ ನಿಗಧಿಪಡಿಸಿದ ಶೇಕಡಾವಾರು ಪ್ರಮಾಣವನ್ನು ಭಾಗಶಃ ಮಾರ್ಪಡಿಸಿ, 2017-18ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಅನುದಾನವನ್ನು ಈ ಕೆಳಕಂಡ ಮಾರ್ಗಸೂಚಿಯ ಪ್ರಕಾರ ಬಳಸಿಕೊಳ್ಳಲು ಈ ಮೂಲಕ ಆದೇಶಿಸಿದೆ.

ಕ್ರ. ಸಂ.	ಉದ್ದೇಶಗಳು	ಮಾರ್ಪಡಿಸಿ ನಿಗದಿಪಡಿಸಲಾದ ಶೇಕಡವಾರು ಮೊತ್ತ
1	ಕುಡಿಯುವ ನೀರು ಕಾಮಗಾರಿಗಳು	➢ ಕ್ರಮ ಸಂಖ್ಯೆ 1 ಮತ್ತು 2ಕ್ಕೆ ಅಗತ್ಯಕ್ಕೆ ತಕ್ಕಂತೆ ಆಯಾ ವರ್ಷಗಳಲ್ಲಿ ನಿಗಧಿಪಡಿಸಿದ ಗರಿಷ್ಠ ಮೊತ್ತವನ್ನು ನಿಗಧಿಪಡಿಸಬಹುದಾಗಿದೆ.
2	ಸಾಮೂಹಿಕ / ಸಾರ್ವಜನಿಕ ಶೌಚಾಲಯ ಮತ್ತು ಸೆಪ್ಟೇಜ್‌ಗಳ ನಿರ್ವಹಣೆ	

---2.

3	ಒಳಚರಂಡಿ ವ್ಯವಸ್ಥೆ ಕಾಮಗಾರಿಗಳು	➢ ಕ್ರ.ಸಂ.3 ರಿಂದ 9ರ ವರೆಗಿನ ಉದ್ದೇಶಗಳಿಗೆ ಸಂಬಂಧಿಸಿದಂತೆ ಆಯಾ ನಗರ ಸ್ಥಳೀಯ ಸಂಸ್ಥೆಗಳ ಆದ್ಯತೆ ಮತ್ತು ಅಗತ್ಯತೆಗೆ ಅನುಸಾರವಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿಕೊಳ್ಳಬಹುದು. ಆದರೆ ಪ್ರತಿ ಉದ್ದೇಶದ ಹಣ ಕಾಯ್ದಿರಿಸುವಿಕೆಯ ಗರಿಷ್ಟ ಮೊತ್ತ ಶೇ.40ರಷ್ಟನ್ನು ಮೀರುವಂತಿಲ್ಲ. ➢ ಕ್ರಿಯಾ ಯೋಜನೆ ನಿಗಧಿಪಡಿಸಿದ ಉದ್ದೇಶಗಳಿಗೆ ಆದ್ಯತೆಯ ಅನುಸಾರ ತಯಾರಿಸಲಾದ ಒಟ್ಟು ಮೊತ್ತವು ನಿಗಧಿಪಡಿಸಲಾದ ಸಂಚಿತ ಮೊತ್ತದ ಶೇ.100ಕ್ಕೆ ನಿಖರವಾಗಿ ಸಮನಾಗಿರತಕ್ಕದ್ದು. ➢ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆ ಮಾಡದ ಘಟಕಗಳಿಗೆ ಹಣದ ಅವಶ್ಯಕತೆ ಇರುವುದಿಲ್ಲ ಎಂಬ ಬಗ್ಗೆ ದೃಢೀಕರಣಗಳನ್ನು ಸ್ಥಳೀಯ ಸಂಸ್ಥೆಗಳು ಕ್ರಿಯಾ ಯೋಜನೆ ಮಂಜೂರಾತಿ ಸಲ್ಲಿಕೆ ಸಂದರ್ಭಗಳಲ್ಲಿ ನೀಡತಕ್ಕದ್ದು.
4	ಘನತ್ಯಾಜ್ಯ ವಸ್ತು ನಿರ್ವಹಣೆ	
5	ಮಳೆ ನೀರು ಚರಂಡಿ ಕಾಮಗಾರಿಗಳು	
6	ಸಮುದಾಯ ಆಸ್ತಿಗಳ ನಿರ್ವಹಣೆ (ಪಾರ್ಕ್ ಒಳಗೊಂಡಂತೆ)	
7	ರಸ್ತೆ ಮತ್ತು ಪಾದಾಚಾರಿ ಮಾರ್ಗಗಳ ನಿರ್ವಹಣೆ	
8	ವಿದ್ಯುತ್ ಬೀದಿ ದೀಪಗಳ ಅಳವಡಿಕೆ / ನಿರ್ವಹಣೆ / ವಿದ್ಯುತ್ ಉಳಿತಾಯದ ಕ್ರಮಗಳು	
9	ಸ್ಮಶಾನ / ಚಿತಾಗಾರ ನಿರ್ವಹಣೆ	

ಮೇಲೆ ನಮೂದಿಸಿದ ಎಲ್ಲಾ ಉದ್ದೇಶಗಳಿಗೆ ನಿಗಧಿಪಡಿಸಲಾದ ಸಂಚಿತ ಮೊತ್ತವು ಹಂಚಿಕೆಯಾದ ಶೇ.100ಕ್ಕೆ ಸಮನಾಗಿರತಕ್ಕದ್ದು.

ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾದ ಸಾಮಾನ್ಯ ಮೂಲ ಅನುದಾನದ ಬಳಕೆಯಲ್ಲಿ ಈ ಕೆಳಕಂಡ ನಿಬಂಧನೆಗಳನ್ನು ನಗರ ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ಅನುಸರಿಸತಕ್ಕದ್ದು.

1) ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ವಾರ್ಷಿಕ ಸಾಮಾನ್ಯ ಮೂಲ ಅನುದಾನದ ಮೊತ್ತಕ್ಕೆ ಅನುಗುಣವಾಗಿ ಮೇಲೆ ತಿಳಿಸಿದ ಸೇವೆಗಳಿಗೆ ಅವುಗಳ ಶೇಕಡಾವಾರು ಮಿತಿಗೆ ಒಳಪಟ್ಟಂತೆ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ, ಕೌನ್ಸಿಲ್ ಅನುಮೋದನೆ ಪಡೆದು, ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ, ಅನುಮೋದನೆ ಪಡೆಯತಕ್ಕದ್ದು.

2) ಜಿಲ್ಲಾಧಿಕಾರಿಗಳಿಂದ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿದ ನಂತರ ಕೆ.ಟಿ.ಪಿ.ಪಿ ಅಧಿನಿಯಮ 1999 (KTPP Act-1999) ಮತ್ತು ಕೆ.ಟಿ.ಪಿ.ಪಿ ನಿಯಮ-2000 (KTPP Rules-2000) ಗಳನ್ನು ಕಡ್ಡಾಯವಾಗಿ ಪಾಲಿಸಿ. ಇ-ಪ್ರಕ್ಯೂರ್‌ಮೆಂಟ್ ಮುಖಾಂತರವೇ ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು.

3) ಬಳಕೆಯಾದ ಅನುದಾನದ ಮಾಸಿಕ ಲೆಕ್ಕಪತ್ರಗಳನ್ನು ಮುಂದಿನ ತಿಂಗಳ 10ನೇ ತಾರೀಖಿನೊಳಕೆ ಕಡ್ಡಾಯವಾಗಿ ಪೌರಾಡಳಿತ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

4) ಪ್ರತಿ ತ್ರೈಮಾಸಿಕದ ಅವಧಿಯ ಅಂತ್ಯದ ಲೆಕ್ಕಪತ್ರಗಳನ್ನು ಆಧರಿಸಿ, ತ್ರೈಮಾಸಿಕ ಉಪಯುಕ್ತತಾ ಪ್ರಮಾಣ ಪತ್ರಗಳನ್ನು ನಿಗಧಿತ ನಮೂನೆಯಲ್ಲಿ ಮುಂದಿನ ತಿಂಗಳ 10ನೇ ತಾರೀಖಿನೊಳಗೆ ಆಯಾ ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು / ಪೌರಾಯುಕ್ತರು / ಮುಖ್ಯಾಧಿಕಾರಿಗಳು, ಜಿಲ್ಲಾಧಿಕಾರಿರವರ ಮೇಲು ಸಹಿಯೊಂದಿಗೆ ಪೌರಾಡಳಿತ ನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

---3.

5) ಮೇಲಿನ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸಿ, ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡದೇ ಇರುವ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮಕೈಗೊಳ್ಳುವುದು ಅನಿವಾರ್ಯವಾಗುತ್ತದೆ ಎಂಬ ಅಂಶವನ್ನು ಗಮನದಲ್ಲಿರಿಸಿಕೊಳ್ಳುವುದು.

(ಎಸ್.ಎನ್ ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ನಗರಾಭಿವೃದ್ಧಿ ಇಲಾಖೆ.

ಪ್ರತಿಯನ್ನು :

1) ಮಹಾಲೇಖಪಾಲರು, ಕರ್ನಾಟಕ, ಲೆಕ್ಕ ಪರಿಶೋಧನೆ/ಲೆಕ್ಕಪತ್ರ, ಬೆಂಗಳೂರು.
2) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
3) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
4) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
5) ಎಲ್ಲಾ ಮಹಾನಗರಪಾಲಿಕೆಗಳ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
6) ಎಲ್ಲಾ ನಗರಸಭೆಗಳ ಪೌರಾಯುಕ್ತರು, ಎಲ್ಲಾ ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳ ಮುಖ್ಯಾಧಿಕಾರಿಗಳು. ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
7) ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ.
8) ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ.
9) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ / ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ
10) ಜಂಟಿ ನಿರ್ದೇಶಕರು (ಆಡಳಿತ), ಜಂಟಿ ನಿರ್ದೇಶಕರು (ಅಭಿವೃದ್ಧಿ), ಜಂಟಿ ನಿರ್ದೇಶಕರು (ಹಣಕಾಸು) ಮತ್ತು ಅಧೀಕ್ಷಕ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ.
11) ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿ.

ಅನುಬಂಧ-3

Details of Office Buildings in Upgraded ULB's (From 2015 onwards)

SL. No.	me of the district		Name of uprgraded ULB	Upgradation GO No	Upgradation GO date	Upgradaded from	Upgraded to	Does have own office building (Yes/No)	If No, is Municipal land available to construct Office Building (Yes/No)
1	Bangalore Urban	1	Hebbagodi	UDD 02 MLR 2015, Benaluru	22.06.2015	Grama Panchayat	City Municipal Council		
		2	Bommasandra TMC	UDD 51 MLR 2015, Benaluru	24.06.2015	Grama Panchayath	Town Municipal Council	No	Yes
2	Davanagere	3	Channagiri TMC	UDD 226 MLR 2016	25-06-2015	TOWN PANCHAYATH	TMC	No	No
		4	Malebennuru TMC	UDD 03 MLR 2015	20-06-2015	GRAM PANCHAYATH	TMC	NO	Yes
4	Udupi	5	TP Byndoor	UDD 06 MLR 2019	14.08.2020	Gram Panchayath	TP	NO	No
								No	Govt Land
5	Belagavi	6	TMC Harugeri	13-08-2015	13-08-2015	Gram Panchayat	Town Municipal Council	Continued in GP Building	Need of Own Building ,land identified for the same
		7	TP Shedabal	UDD 74 MLR 2015, Bangalre	22-06-2015	Grampanchayat	Town Panchayat	No	Yes
		8	TP M.K.Hubli	UDD47MLR2015 Banglore	23.06.2015	Grampanchayat	Town panchayat	No	Yes
6	Vijapur	9	TP Almel	No.N.A.E.41 MLR.2015 BENGALURU	25-06-2015	Gram panchayat	Town Panchayat	No	Yes
		10	TP CHADCHAN	No.N.A.E.40 MLR.2015 BENGALURU	24-06-2015	Gram panchayat	Town Panchayat	No	Yes
		11	TP Kolhar	No.UDD 45 MLR 2015 BENGALURU	24-06-2015	Gram panchayat	Town Panchayat	No	Yes
		12	TP Managuli	No.A.E.38 MLR.2015 BENGALURU	22-06-2015	Gram panchayat	Town Panchayat	No	Yes
		13	TP Nidagundi	UDD 38 MLR 2015, Bengaluru	22-06-2015	Grama Panchayat Nalatwad	Town Panchayat	No	Yes
		14	TP Tikota	No.N.A.E.05 MLR.2018 BENGALURU	05-06-2020	Gram panchayat	Town Panchayat	No	No
7	Gulbarga	15	Kalagi	UDD 136 MLR 2016	10-01-2019	Gram Panchayat	Town Panchayat	No	Yes

ಮುಖ್ಯ [illegible]ಧಿಕಾರಿ
ನಗರ ಬಡತನ ನಿರ್ಮೂಲನಾ ನಿರ್ವಹಣಾ ಘಟಕ
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 24 ಯುಎಂಎಸ್ 2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:29-01-2021

93
UDS
29/1/21

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 121ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 121ಕ್ಕೆ ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಲತಾ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಎಂ.ಎ-2 & ಮಂಡಳಿ)
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	121
ಉತ್ತರಿಸಬೇಕಾದ ದಿನಾಂಕ	29.01.2021
ಉತ್ತರಿಬೇಕಾದವರು	ನಗರಾಭಿವೃದ್ಧಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯ ಹೊಳೆನರಸೀಪುರ ಪುರಸಭೆಯಿಂದ ಅನುಮೋದನೆಯಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಹೊಳೆನರಸೀಪುರ ಪುರಸಭೆ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳು ಇರುವುದಿಲ್ಲ.
ಆ)	ಅವುಗಳ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ; ಪೂರ್ಣಗೊಂಡಿರುವ ಕಾಮಗಾರಿಗಳೆಷ್ಟು; ಎಷ್ಟು ಕುಡಿಯುವ ಘಟಕಗಳು ಕಾರ್ಯ ನಿರ್ವಹಿಸುತ್ತಿದೆ; ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)	ಪುರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಹೊಸದಾಗಿ ಈ ಕೆಳಕಂಡ ಎರಡು ಸ್ಥಳಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು 15ನೇ ಹಣಕಾಸು ಯೋಜನೆಯಡಿ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ. 1. ಹಾಸನ ಮೈಸೂರು ಮುಖ್ಯ ರಸ್ತೆ ಪೊಲೀಸ್ ಕ್ವಾಟ್ರಸ್ ಮುಂಭಾಗ. 2. ವಾರ್ಡ್ ನಂ-1ರ ಕೆ.ಎನ್.ಎ ಬಡಾವಣೆ ಮಹಿಳಾ ಪ್ರಥಮ ದರ್ಜೆ ಕಾಲೇಜು ಮುಂಭಾಗ. ಸಕ್ಷಮ ಪ್ರಾಧಿಕಾರದಿಂದ ಕ್ರಿಯಾಯೋಜನೆ ಅನುಮೋದನೆ ಪಡೆದು, ಏಪ್ರಿಲ್-2021ರ ಮಾಹೆಯ ಅಂತ್ಯದೊಳಗಾಗಿ ಶುದ್ಧ ಕುಡಿಯುವ ನೀರಿನ ಘಟಕದ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.
ಇ)	ಹಾಸನ ಜಿಲ್ಲೆಯ ಹೊಳೆನರಸೀಪುರ ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ಒಳಚರಂಡಿಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	ಹೊಳೆನರಸೀಪುರ ಪುರಸಭಾ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಒಳಚರಂಡಿ ಹಾಳಾಗಿರುವುದು ಪುರಸಭೆಯ ಗಮನಕ್ಕೆ ಬಂದಿರುತ್ತದೆ. ವಿವರ ಕೆಳಗಿನಂತಿದೆ. 1. ವಾರ್ಡ್ ನಂ.17ರ ಹೌಸಿಂಗ್ ಬೋರ್ಡ್ ಟ್ಯಾಂಕ್‌ನಿಂದ ಚಿಟ್ಟನಹಳ್ಳಿ ಬಡಾವಣೆ ಸಿಂಗಮ್ಮ ಬಡಾವಣೆ. 2. ವಾರ್ಡ್ ನಂ.13ರ ಗಾಂಧಿನಗರ, ವಾರ್ಡ್ ನಂ.1ರ ಸೂರನಹಳ್ಳಿ ವಿದ್ಯುತ್ ನಗರ ಬಡಾವಣೆ, ಸೂರನಹಳ್ಳಿ ಮುಖ್ಯ ರಸ್ತೆ. 3. ವಾರ್ಡ್ ನಂ.9ರ ಸ್ವೀಪರ್ಸ್ ಕಾಲೋನಿ, ಹಯಾತ್

		4. ನಗರ, ವಾರ್ಡ್ ನಂ.20ರ ಪೋಲಿಸ್ ಕ್ವಾಟ್ರಸ್ ಹಿಂಭಾಗ. ವಾರ್ಡ್ ನಂ.19ರ ಹೌಸಿಂಗ್ ಬೋರ್ಡ್ ಮುಖ್ಯ ರಸ್ತೆ.
ಈ)	ಬಂದಿದ್ದಲ್ಲಿ ಒಳ ಚರಂಡಿಗಳ ದುರಸ್ಥಿ ಕಾರ್ಯವನ್ನು ಕೈಗೊಳ್ಳಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ; ಯಾವ ಕಾಲಮಿತಿಯಲ್ಲಿ ದುರಸ್ಥಿ ಕಾರ್ಯವನ್ನು ಪೂರ್ಣಗೊಳಿಸಲಾಗುತ್ತದೆ? (ಸಂಪೂರ್ಣ ಮಾಹಿತಿ ನೀಡುವುದು)	ಮೇಲ್ಕಂಡ ಸ್ಥಳಗಳಲ್ಲಿ ಒಳಚರಂಡಿ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ಸುಮಾರು ಅಂದಾಜು ರೂ.5.50 ಕೋಟಿ ಅನುದಾನದ ಅವಶ್ಯಕತೆಯಿರುತ್ತದೆ. ಪ್ರಸ್ತುತ ಪುರಸಭೆಯ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದ ಕಾರಣ ಸರ್ಕಾರದ ವಿವಿಧ ಯೋಜನೆಗಳಡಿ ಹಾಗೂ ಸ್ಥಳೀಯ ಸಂಸ್ಥೆ ಅನುದಾನದ ಲಭ್ಯತೆಗೆ ಅನುಗುಣವಾಗಿ ಕಾಲಕಾಲಕ್ಕೆ ಒಳಚರಂಡಿ ದುರಸ್ಥಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಸಂಖ್ಯೆ ನಅಇ 24 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	ಶ್ರೀ ವೆಂಕಟರಮಣಯ್ಯ.ಟಿ (ದೊಡ್ಡಬಳ್ಳಾಪುರ)
ಪ್ರಶ್ನೆ ಸಂಖ್ಯೆ	106
ಉತ್ತರಿಸಬೇಕಾದ ದಿನಾಂಕ	29-01-2021
ಉತ್ತರಿಸಬೇಕಾದವರು	ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ದೊಡ್ಡಬಳ್ಳಾಪುರ ನಗರಸಭೆಯ 31 ವಾರ್ಡ್‌ಗಳಲ್ಲಿ ಕುಡಿಯುವ ನೀರು ಉಪ್ಪಿನಂಶದಿಂದ ಕೂಡಿದ್ದು, ಶುದ್ಧ ಕುಡಿಯುವ ನೀರನ್ನು ಪೂರೈಸಲು ಕಾವೇರಿ ನೀರು ಸಂಪರ್ಕ ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:	ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?	ಉದ್ಭವಿಸುವುದಿಲ್ಲ

ಸಂಖ್ಯೆ ನಅಇ 23 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	ಡಾ|| ಅಜಯ್ ಧರ್ಮ ಸಿಂಗ್ (ಜೇವರ್ಗಿ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	103
ಉತ್ತರಿಸಬೇಕಾದ ದಿನಾಂಕ	29-1-2021
ಉತ್ತರಿಸಬೇಕಾದವರು	ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ.
ಅ	ರಾಜ್ಯದ ವಿವಿಧ ಪಟ್ಟಣ ಪ್ರದೇಶಗಳ ಎಷ್ಟು ನಗರಗಳಲ್ಲಿ ಕನನೀಸ ಮತ್ತು ಒಚ ಮಂಡಳಿ ವತಿಯಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ; (ಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ 276 ಸ್ಥಳೀಯ ಸಂಸ್ಥೆಗಳಿದ್ದು ಇವುಗಳಲ್ಲಿ ಕುಶಾಲನಗರ, ರಾಬರ್ಟ್‌ಸನ್‌ಪೇಟೆ, ಹುಬ್ಬಳಿ-ಧಾರವಾಡ, ಮಂಡ್ಯ, ರಾಮನಗರ, ಚನ್ನಪಟ್ಟಣ, ಬೆಳಗಾಂ, ಬಿಜಾಪುರ, ಕಲಬುರಗಿ ಮತ್ತು ಶಿವಮೊಗ್ಗ ನಗರ/ಪಟ್ಟಣಗಳಲ್ಲಿ ಮಾತ್ರ ಕ.ನ.ನೀ.ಸ. ಮತ್ತು ಒ.ಚ ಮಂಡಳಿ ವತಿಯಿಂದ ಗ್ರಾಹಕರ ಹಂತದವರೆಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.
ಆ	ನೀರು ಸರಬರಾಜು ಮಾಡುತ್ತಿರುವ ನಗರಗಳಲ್ಲಿ ಮಾಹೆಯಾನ ಯಾವ ದರಗಳನ್ನು ನಿಗಧಿಪಡಿಸಲಾಗಿದೆ;	ಈ ಕೆಳಗಿನಂತೆ ಪ್ರತಿ ಸಂಪರ್ಕಕ್ಕೆ ಮಾಸಿಕ ಕನಿಷ್ಠ ದರಗಳನ್ನು ನಿಗಧಿಪಡಿಸಲಾಗಿದೆ. **ಶಿವಮೊಗ್ಗ ಮಹಾನಗರ ಪಾಲಿಕೆ** ಗೃಹಬಳಕೆ : ರೂ.120/- ಗೃಹೇತರ ಬಳಕೆ : ರೂ 240/- ವಾಣಿಜ್ಯ/ಕೈಗಾರಿಕೆ ಬಳಕೆ : ರೂ. 700/- **ರಾಮನಗರ ಮತ್ತು ಚನ್ನಪಟ್ಟಣ ನಗರಸಭೆ** ಗೃಹಬಳಕೆ : ರೂ.218/- ಗೃಹೇತರ ಬಳಕೆ : ರೂ 436/- ವಾಣಿಜ್ಯ/ಕೈಗಾರಿಕೆ ಬಳಕೆ : ರೂ. 880/- **ರಾಬರ್ಟ್ಸನ್ ಪೇಟೆ** ಗೃಹಬಳಕೆ : ರೂ.120/- ಗೃಹೇತರ ಬಳಕೆ : ರೂ 240/- ವಾಣಿಜ್ಯ/ಕೈಗಾರಿಕೆ ಬಳಕೆ : ರೂ. 480/- **ಕುಶಾಲನಗರ :** ಗೃಹಬಳಕೆ – ರೂ.142.00 ಗೃಹೇತರಬಳಕೆ – ರೂ.283. 00 ವಾಣಿಜ್ಯ ಬಳಕೆ – ರೂ.567. 00

ಮಂಡ್ಯ:

ಗೃಹಬಳಕೆ – ರೂ.282.00

ಗೃಹೇತರಬಳಕೆ – ರೂ.564.00

ವಾಣಿಜ್ಯ ಬಳಕೆ – ರೂ.1128.00

ಧಾರವಾಡ, ಬೆಳಗಾವಿ, ವಿಜಯಪುರ:

ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸರ್ಕಾರದ ಆದೇಶ ನಂ: ನಇ 07 ಯುಡಬ್ಲುಎಸ್ 2001 ಬೆಂಗಳೂರು ದಿನಾಂಕ 20-07-2011ರ ಪ್ರಕಾರ ದರಗಳನ್ನು ನಿಗಧಿ ಪಡಿಸಲಾಗಿದೆ.

ನೀರಿನ ದರ (ಮೀಟರ್ ಇರುವ ಗ್ರಾಹಕರಿಗೆ)

ಗ್ರಾಹಕ ವರ್ಗ	ದರದ ಹಂತ		ಬಳಕೆಯ ದರ
	ಕನಿಷ್ಠ	ಗರಿಷ್ಠ	ರೂ/ಕಿ.ಲೀ
	ಕಿ.ಲೀ.	ಕಿ.ಲೀ..	ರೂ/ಕಿ.ಲೀ
ಗೃಹ ಸಂಪರ್ಕ	0	8	7-00
	8	15	9-00
	15	25	11-00
	25 ಕಿಂತ	ಅಧಿಕ	13-00
ಗೃಹೇತರ ಸಂಪರ್ಕ	0	8	14-00
	8	15	18-00
	15	25	22-00
	25 ಕಿಂತ	ಅಧಿಕ	26-00
ವಾಣಿಜ್ಯ/ ಕೈಗಾರಿಕೆ	0	8	28-00
	8	15	36-00
	15	25	44-00
	25 ಕಿಂತ	ಅಧಿಕ	52-00

ನೀರಿನ ದರ (ಮೀಟರ್ ಹೊಂದದೇ ಇರುವ ಗ್ರಾಹಕರಿಗೆ)

ಕ್ರ.ಸಂ	ಗ್ರಾಹಕ ವರ್ಗ	ಪ್ರತಿ ಸಂಪರ್ಕಕ್ಕೆ ಮಾಸಿಕ ಕನಿಷ್ಠ ದರ (ರೂ. ಗಳಲ್ಲಿ)
1	ಗೃಹ ಬಳಕೆ	**175-00**
2	ಗೃಹೇತರ ಬಳಕೆ	**350-00**
3	ವಾಣಿಜ್ಯ / ಕೈಗಾರಿಕೆ	**700-00**

		<u>ವಿಜಯಪುರ</u> ಮಹಾನಗರ ವ್ಯಾಪ್ತಿಯಲ್ಲಿ, ಆಯುಕ್ತರು ಮಹಾನಗರ ಪಾಲಿಕೆ ವಿಜಯಪುರ ರವರು ದಿನಾಂಕ: 21.12.2016 ರಂದು ಅನುಮೋದನೆ ನೀಡಿದಂತೆ ಈ ಕೆಳಕಂಡ ಮಾಹೆಯಾನ ದರಗಳನ್ನು ನಿಗಧಿ ಪಡಿಸಲಾಗಿದೆ.

ನೀರಿನ ದರ (ಮೀಟರ್ ಇರುವ ಗ್ರಾಹಕರಿಗೆ)

ಗ್ರಾಹಕ ವರ್ಗ	ದರದ ಹಂತ		ಬಳಕೆಯ ದರ
	ಕನಿಷ್ಠ	ಗರಿಷ್ಠ	ರೂ/ಕಿ.ಲೀ
	ಕಿ.ಲೀ.	ಕಿ.ಲೀ..	ರೂ/ಕಿ.ಲೀ
ಗೃಹ ಸಂಪರ್ಕ	0	8	7-36
	8	15	9-46
	15	25	11-56
	25 ಕಿಂತ	ಅಧಿಕ	13-66
ಗೃಹೇತರ ಸಂಪರ್ಕ	0	8	14-71
	8	15	18-92
	15	25	23-12
	25 ಕಿಂತ	ಅಧಿಕ	27-33
ವಾಣಿಜ್ಯ / ಕೈಗಾರಿಕೆ	0	8	29-43
	8	15	37-84
	15	25	46-24
	25 ಕಿಂತ	ಅಧಿಕ	54-65

ನೀರಿನ ದರ (ಮೀಟರ್ ಹೊಂದದೇ ಇರುವ ಗ್ರಾಹಕರಿಗೆ)

ಕ್ರ.ಸಂ	ಗ್ರಾಹಕ ವರ್ಗ	ಪ್ರತಿ ಸಂಪರ್ಕಕ್ಕೆ ಮಾಸಿಕ ಕನಿಷ್ಠ ದರ (ರೂ. ಗಳಲ್ಲಿ)
1	ಗೃಹ ಬಳಕೆ	**175-00**
2	ಗೃಹೇತರ ಬಳಕೆ	**350-00**
3	ವಾಣಿಜ್ಯ / ಕೈಗಾರಿಕೆ	**700-00**

<u>ಕಲಬುರಗಿ</u> ನಗರದಲ್ಲಿ ಒಟ್ಟು 55 ವಾರ್ಡ್‌ಗಳಿರುತ್ತವೆ. ಇದರಲ್ಲಿ 04 ವಾರ್ಡ್‌ಗಳಿಗೆ ಸಂಪೂರ್ಣವಾಗಿ ಹಾಗೂ 07 ವಾರ್ಡ್‌ಗಳಿಗೆ ಭಾಗಶಃ 24x7 ನೀರು ಪೂರೈಸಲಾಗುತ್ತಿದೆ.

		1) 24x7 ನೀರು ಪೂರೈಸಲಾಗುತ್ತಿರುವ ಪ್ರದೇಶಗಳಲ್ಲಿ ಮೀಟರ್‌ಗಳನ್ನು ಅಳವಡಿಸಲಾಗಿದ್ದು, ನೀರಿನ ಬಳಕೆಗೆ ಅನುಗುಣವಾಗಿ ಪ್ರತಿ ತಿಂಗಳು ವಿಧಿಸಲಾಗುವ ದರವು ಈ ಕೆಳಗಿನಂತಿವೆ. **ಗೃಹ ಸಂಪರ್ಕ:-** • 0-8 ಕಿಲೋ ಲೀಟರ್ ರೂ.6.00 ಪ್ರತಿ ಕಿಲೋ ಲೀಟರ್. • 8-15 ಕಿಲೋ ಲೀಟರ್ ರೂ.8.00 ಪ್ರತಿ ಕಿಲೋ ಲೀಟರ್. •15-25 ಕಿಲೋ ಲೀಟರ್ ರೂ.10.00 ಪ್ರತಿ ಕಿಲೋ ಲೀಟರ್. • 25ಕಿಲೋ ಲೀಟರ್‌ಕ್ಕಿಂತ ಅಧಿಕ ರೂ.12.00 ಪ್ರತಿ ಕಿಲೋ ಲೀಟರ್. **ಗೃಹೇತರ ಸಂಪರ್ಕ:-** • 0-15 ಕಿಲೋ ಲೀಟರ್ ರೂ.16.00 ಪ್ರತಿ ಕಿಲೋ ಲೀಟರ್. • 15-25 ಕಿಲೋ ಲೀಟರ್ ರೂ.20.00 ಪ್ರತಿ ಕಿಲೋ ಲೀಟರ್. • 25 ಕಿಲೋ ಲೀಟರ್ ಕ್ಕಿಂತ ಅಧಿಕ ರೂ.24.00 ಪ್ರತಿ ಕಿಲೋ ಲೀಟರ್. **ವಾಣಿಜ್ಯ/ ಕೈಗಾರಿಕೆ ಸಂಪರ್ಕ** • 0-15 ಕಿಲೋ ಲೀಟರ್ ರೂ.32.00 ಪ್ರತಿ ಕಿಲೋ ಲೀಟರ್. • 15-25 ಕಿಲೋ ಲೀಟರ್ ರೂ.40.00 ಪ್ರತಿ ಕಿಲೋ ಲೀಟರ್. • 25 ಕಿಲೋ ಲೀಟರ್ ಕ್ಕಿಂತ ಅಧಿಕ ರೂ.48.00 ಪ್ರತಿ ಕಿಲೋ ಲೀಟರ್. ಕಲಬುರಗಿ ನಗರದ ಇನ್ನುಳಿದ ಮೀಟರ್ ಹೊಂದದೇ ಇರುವಂತಹ ಪ್ರದೇಶಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 07 ಯುಡಬ್ಲೂಎಸ್ 2011, ದಿನಾಂಕ 20-07-2011 ರಂತೆ, ಪ್ರತಿ ತಿಂಗಳು ಕನಿಷ್ಟ ದರ ಗೃಹ ಸಂಪರ್ಕಕ್ಕೆ ರೂ.175.00, ಗೃಹೇತರ ಸಂಪರ್ಕಕ್ಕೆ ರೂ.350.00 ಮತ್ತು ವಾಣಿಜ್ಯ / ಕೈಗಾರಿಕೆ ಸಂಪರ್ಕಕ್ಕೆ ರೂ.700.00 ಗಳನ್ನು ನಿಗದಿಪಡಿಸಲಾಗಿರುತ್ತದೆ.
ಇ	ದರಗಳನ್ನು ನಿಗಧಿಪಡಿಸುವಾಗ ಅನುಸರಿಸಲಾಗಿರುವ ಮನದಂಡಗಳೇನು ?	ಗ್ರಾಹಕರಿಗೆ ಸುರಕ್ಷಿತ ಕುಡಿಯುವ ನೀರಿನ ದರಗಳನ್ನು ನಿಗದಿಪಡಿಸುವಾಗ ನಿರ್ವಹಣೆ, ಸಿಬ್ಬಂದಿಯ ವೆಚ್ಚ, ವಿದ್ಯುತ್ ವೆಚ್ಚ ಮತ್ತು ಶುದ್ಧೀಕರಣಕ್ಕೆ ಅಗತ್ಯವಿರುವ ರಾಸಾಯನಿಕ ಮತ್ತು ಇತರೆ ದುರಸ್ಥಿ ವೆಚ್ಚಗಳನ್ನು ಪರಿಗಣಿಸಿ ದರಗಳನ್ನು ತಯಾರಿಸಿ, ಸ್ಥಳೀಯ ಸಂಸ್ಥೆಯ ಅನುಮೋದನೆ ಪಡೆದು ನಿಗದಿಪಡಿಸಲಾಗುತ್ತಿದೆ.

ಈ	ಹಲವಾರು ನಗರಗಳಲ್ಲಿ ಪ್ರಸ್ತುತ ನಿಗಧಿಪಡಿಸಿರುವ ನೀರಿನ ದರವು ಹೆಚ್ಚಿದ್ದು, ದರವನ್ನು ಕಡಿಮೆಗೊಳಿಸುವಂತೆ ಅಲ್ಲಿನ ನಾಗರೀಕರು ಮನವಿಗಳನ್ನು ಸಲ್ಲಿಸಿರುವವರೇ;	ಮಂಡಳಿವತಿಯಿಂದ ನಿರ್ವಹಿಸುತ್ತಿರುವ ನೀರು ಸರಬರಾಜು ವ್ಯವಸ್ಥೆಯಲ್ಲಿ ಮಂಡ್ಯ ನಗರವನ್ನು ಹೊರತುಪಡಿಸಿ ಬೇರೆ ಯಾವುದೇ ನಗರಗಳಲ್ಲಿ ನೀರಿನ ದರವನ್ನು ಕಡಿಮೆಗೊಳಿಸುವಂತೆ ಅಲ್ಲಿನ ನಾಗರಿಕರಿಂದ ಮನವಿ ಸ್ವೀಕೃತಗೊಂಡಿರುವುದಿಲ್ಲ.
ಉ	ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಮಂಡ್ಯ ನಗರದ ನಾಗರೀಕರು ಸಲ್ಲಿಸಿರುವ ಮನವಿಗಳ ಬಗ್ಗೆ ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ ಮತ್ತು ಮಾನ್ಯ ಶಾಸಕರು, ಮಂಡ್ಯ ವಿಧಾನಸಭಾ ಕ್ಷೇತ್ರ ರವರ ಉಪಸ್ಥಿತಿಯಲ್ಲಿ ಸಭೆ ನಡೆಸಿ 2014-15 ರಿಂದ 2019-20 ರವರೆಗಿನ ಕುಡಿಯುವ ನೀರಿನ ದರ ಪರಿಷ್ಕರಣೆಯಿಂದ ವಿದ್ಯುತ್ ಬಳಕೆ ಶುಲ್ಕವನ್ನು ಹೊರತುಪಡಿಸಿ (ಅಂದರೆ ವಿದ್ಯುತ್ ಶುಲ್ಕವನ್ನು ಈಗಾಗಲೇ ಸರ್ಕಾರದ ಅನುದಾನದಲ್ಲಿ ಪಾವತಿಸಿರುವುದರಿಂದ) ಶುದ್ಧೀಕರಣ ಹಾಗೂ ದುರಸ್ಥಿ ಕಾರ್ಯದ ವೆಚ್ಚಗಳನ್ನು ಮಿತಿಗೊಳಿಸಿ, ಪರಿಷ್ಕೃತ ದರಗಳ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದ್ದರು. ಅದರಂತೆ, ಮಂಡ್ಯ ನಗರ ಕುಡಿಯುವ ನೀರಿನ ದರವನ್ನು ದಿನಾಂಕ:01.04.2018 ರಿಂದ ಅನ್ವಯವಾಗುವಂತೆ, ವಿದ್ಯುತ್ ಶುಲ್ಕವನ್ನು ಹೊರತುಪಡಿಸಿ, ಗೃಹಬಳಕೆಗೆ ರೂ.160.00, ಗೃಹೇತರಬಳಕೆ ರೂ.320.00, ವಾಣಿಜ್ಯ/ ಕೈಗಾರಿಕೆ ಬಳಕೆ ರೂ.620.00 ಗಳನ್ನು ನಿಗದಿಪಡಿಸಿ, ಪ್ರಸ್ತಾವನೆಯನ್ನು ನಗರಸಭೆಗೆ ಸಲ್ಲಿಸಲಾಗಿದೆ ಮತ್ತು ಸರ್ಕಾರದ ಆದೇಶದ ಸಂಖ್ಯೆ ನಅಇ 7 ಯುಡಬ್ಲ್ಯೂಎಸ್ 2011, ದಿನಾಂಕ 20.07.2011 ರನ್ವಯ ಕುಡಿಯುವ ನೀರಿನ ದರವನ್ನು ಸ್ಥಳೀಯ ಸಂಸ್ಥೆಗಳು ಪ್ರತಿ ಮೂರು ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕಾಗಿರುವುದರಿಂದ, ಮಂಡ್ಯ ನಗರದ ಕುಡಿಯುವ ನೀರಿನ ದರವನ್ನು 2020-21ನೇ ಸಾಲಿಗೆ ವಿದ್ಯುತ್ ಶುಲ್ಕವನ್ನು ಹೊರತುಪಡಿಸಿ, ಗೃಹಬಳಕೆಗೆ ರೂ.202.00, ಗೃಹೇತರಬಳಕೆ ರೂ.405.00, ವಾಣಿಜ್ಯ/ ಕೈಗಾರಿಕೆ ಬಳಕೆ ರೂ.810.00 ರಂತೆ ಏಪ್ರಿಲ್-2020ನೇ ಸಾಲಿನಿಂದ ಅನ್ವಯವಾಗುವಂತೆ ದರವನ್ನು ನಿಗಧಿಪಡಿಸಲು ಪ್ರಸ್ತಾವನೆಯನ್ನು ಮಂಡ್ಯ ನಗರಸಭೆಗೆ ಸಲ್ಲಿಸಲಾಗಿದೆ.

ಸಂಖ್ಯೆ ನಅಇ 18 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	ಶ್ರೀ.ಈಶ್ವರ್ ಖಂಡ್ರೆ (ಭಾಲ್ಕಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	89
ಉತ್ತರಿಸಬೇಕಾದ ದಿನಾಂಕ	29-01-2021
ಉತ್ತರಿಸಬೇಕಾದವರು	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಕೆ.ಯು.ಐ.ಎಫ್.ಡಿ.ಸಿ ವತಿಯಿಂದ ಪಟ್ಟಣ ಪ್ರದೇಶಗಳಲ್ಲಿ ಎಷ್ಟು ನಿರಂತರ ಕುಡಿಯುವ ನೀರು ಸರಬರಾಜು ಕಾಮಗಾರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರಗಳನ್ನು ಒದಗಿಸುವುದು);	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ರೂ.140.54 ಕೋಟಿಗಳ ಅಂದಾಜು ವೆಚ್ಚದಲ್ಲಿ ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಕೆ.ಯು.ಐ.ಎಫ್.ಡಿ.ಸಿ ವತಿಯಿಂದ ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ ಬೀದರ್ ಜಿಲ್ಲೆಯ ಬೀದರ್ ನಗರದ 35 ವಾರ್ಡ್‌ಗಳ ಪೈಕಿ 28 ವಾರ್ಡ್‌ಗಳಲ್ಲಿ (7 ವಾರ್ಡ್‌ಗಳಲ್ಲಿ ಕೆ.ಯು.ಡಬ್ಲುಎಸ್.ಡಿ.ಬಿ ವತಿಯಿಂದ ವಿತರಣಾ ಕೊಳವೆ ಅಳವಡಿಸಲಾಗಿದೆ) ನಿರಂತರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಂಡಿದ್ದು 286 ಕಿ.ಮೀ ಕೊಳವೆ ವಿತರಣಾ ಜಾಲ ಹಾಗೂ 27,400 ಮನೆಗಳಿಗೆ ನಳ ಸಂಪರ್ಕ ನೀಡುವ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಬೀದರ್ ಜಿಲ್ಲೆಯ, ಬಸವಕಲ್ಯಾಣ ಪಟ್ಟಣದಲ್ಲಿ 31 ವಾರ್ಡ್‌ಗಳಲ್ಲಿ ನಿರಂತರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಂಡಿದ್ದು 166 ಕಿ.ಮೀ ಕೊಳವೆ ವಿತರಣಾ ಜಾಲ ಹಾಗೂ 11841 ಮನೆಗಳಿಗೆ ನಳ ಸಂಪರ್ಕ ನೀಡುವ ಕಾಮಗಾರಿ ಪೂರ್ಣಗೊಳಿಸಲಾಗಿದೆ.
ಆ)	ಈ ಕಾಮಗಾರಿಗಳಲ್ಲಿ ಮುಕ್ತಾಯಗೊಂಡಿರುವ ಹಾಗೂ	ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ಸಮಗ್ರ ಕುಡಿಯುವ ನೀರು ಸರಬರಾಜು ಒದಗಿಸುವ

	ಬಾಕಿ ಇರುವ ಕಾಮಗಾರಿಗಳು ಯಾವುವು; ಬಾಕಿ ಇರಲು ಕಾರಣವೇನು; (ಗುತ್ತಿಗೆದಾರರ ವಿವರಗಳನ್ನು ಒದಗಿಸುವುದು);	ಕಾಮಗಾರಿಯನ್ನು ಜನವರಿ-2018 ರಿಂದ ಪ್ರಾರಂಭಗೊಳಿಸಿ, ಜ್ಯಾಕವೆಲ್, ಕಚ್ಚಾ ನೀರಿನ ಪಂಪುಗಳು, ಕಚ್ಚಾ ನೀರಿನ ಏರು ಕೊಳವೆ ಮಾರ್ಗ ಹಾಗೂ ಶುದ್ಧ ನೀರಿನ ಗುರುತ್ವಾಕರ್ಷಣ ಕೊಳವೆ ಮಾರ್ಗಗಳ ಕಾಮಗಾರಿಗಳನ್ನು ಆಗಸ್ಟ್-2020 ರಲ್ಲಿ ಪೂರ್ಣಗೊಳಿಸಿ ಪಟ್ಟಣಕ್ಕೆ ಕಚ್ಚಾ ನೀರು ಸರಬರಾಜು ಮಾಡಲಾಗುತ್ತಿದೆ. ಬಾಕಿ ಉಳಿದ 20 ಎಂ.ಎಲ್.ಡಿ ಸಾಮರ್ಥ್ಯದ ಜಲಶುದ್ಧೀಕರಣ ಘಟಕದ ಕಾಮಗಾರಿಗಳು ಕೋವಿಡ್-19 ರ ಲಾಕ್‌ಡೌನ್‌ನಿಂದಾಗಿ ಬಾಕಿ ಇರುತ್ತದೆ. ಕೆ.ಯು.ಐ.ಎಫ್.ಡಿ.ಸಿ ವತಿಯಿಂದ ಗುತ್ತಿಗೆ ಕರಾರಿನಂತೆ ಸಂಪೂರ್ಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಯಾವುದೇ ನಿರ್ಮಾಣ ಕಾಮಗಾರಿ ಬಾಕಿ ಇರುವುದಿಲ್ಲ. ಕರಾರಿನ ಪ್ರಕಾರ ಗುತ್ತಿಗೆದಾರರಾದ ಮೆ|| ವಿಶ್ವರಾಜ್ ಇನ್‌ಫ್ರಾಸ್ಟ್ರರ್ಸ್ ಲಿ. ಮುಂಬಾಯಿ ರವರು ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾರೆ ಹಾಗೂ ನೀರು ಸರಬರಾಜು ವ್ಯವಸ್ಥೆಯ ಕಾರ್ಯಚಾರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸುತ್ತಿರುತ್ತಾರೆ.
ಇ)	ಬೀದರ್ ಪಟ್ಟಣದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮುಖಾಂತರ ಸುಮಾರು 80 ಕೋಟಿ ರೂ.ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೊಂಡಿದ್ದರೂ, ಇದುವರೆಗೂ ಮನೆಗಳಿಗೆ ನೀರು ಸರಬರಾಜು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಸುಧಾರಿತ ನೀರು ಸರಬರಾಜು ಯೋಜನೆಯಡಿ ರೂ.22.76 ಕೋಟಿಗಳ ವೆಚ್ಚದಲ್ಲಿ ಬೀದರ್ ನಗರದ 5 ವಲಯಗಳಲ್ಲಿ (1, 2, 3, 7 ಮತ್ತು 8) ವಿತರಣಾ ಜಾಲ ಮತ್ತು 1700 ಸಂಖ್ಯೆ ಗೃಹ ಸಂಪರ್ಕ ಒದಗಿಸುವ ಕಾಮಗಾರಿಗಳನ್ನ 2016 ರಲ್ಲಿ ಪೂರ್ಣಗೊಳಿಸಿ, 2017 ರಲ್ಲಿ ಬೀದರ್ ನಗರಸಭೆಗೆ ಹಸ್ತಾಂತರಿಸಲಾಗಿದೆ. ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಬೀದರ್ ನಗರಕ್ಕೆ ಕಾರ್ಯಗತಗೊಳಿಸಿದ ಯೋಜನೆಯನ್ನು ಚಾಲನೆಗೊಳಿಸಿ ನಾಗರಿಕರಿಗೆ Intermittent ನೀರು ಸರಬರಾಜು ಮಾಡಲಾಗುತ್ತಿದೆ, ನಿರಂತರ ನೀರು ಸರಬರಾಜು ಮಾಡಲು

		ಸಗಟು ನೀರು ಸರಬರಾಜುನಲ್ಲಿ ಕೊರತೆ ಇರುತ್ತದೆ, ಕಾರಣವೇನೆಂದರೆ ನಿರಂತರ ನೀರು ಸರಬರಾಜು ಯೋಜನೆಯನ್ನು ವಿನ್ಯಾಸಿಸುವ ಸಮಯದಲ್ಲಿ ಬೀದರ್ ನಗರಕ್ಕೆ ಕಾರಂಜಾ ಜಲಾಶಯ ಮತ್ತು ಮಾಂಜ್ರಾ ನದಿ ಮೂಲದಿಂದ ಸಗಟು ನೀರು ಸರಬರಾಜು ಮಾಡಲಾಗುತ್ತಿತು, 2014ರಿಂದ ಮಾಂಜ್ರಾ ನದಿಯು ಬೇಸಿಗೆ ಸಮಯದಲ್ಲಿ ಬತ್ತಿಹೋಗುತ್ತಿರುತ್ತದೆ. ಹಾಗೂ ಇದರ ನಿರ್ವಹಣೆಯನ್ನು ಕೆ.ಯು.ಡಬ್ಲು.ಎಸ್. ಮತ್ತು ಡಿ.ಬಿ ವತಿಯಿಂದ ಸ್ಥಗೀತಗೊಳಿಸಲಾಗಿದೆ. ಅದ್ದರಿಂದ ಕಾರಂಜಾ ಜಲಾಶಯ ಮೂಲದಿಂದ ಮಾತ್ರ ನೀರು ಸರಬರಾಜು ಮಾಡಲಾಗುತ್ತಿದೆ, ಆದ್ದರಿಂದ ಅಗತ್ಯಕ್ಕಿಂತ ಕಡಿಮೆ ಪ್ರಮಾಣದ ಸಗಟು ನೀರು ಸರಬರಾಜು ಮಾಡಲಾಗುತ್ತಿದ್ದು Intermittent ನೀರು ವಿತರಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಬಸವಕಲ್ಯಾಣ ಪಟ್ಟಣಕ್ಕೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಕಾರ್ಯಗತಗೊಳಿಸಿದ ಯೋಜನೆಯನ್ನು ಚಾಲನೆಗೊಳಿಸಿ ಪಟ್ಟಣದ 16 ವಾರ್ಡ್‌ಗಳಿಗೆ (6 ವಲಯ) ನಿರಂತರ ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ 15 ವಾರ್ಡ್‌ಗಳಿಗೆ (2 ವಲಯ) ಪ್ರಾಯೋಗಿಕ ಹಂತದಲ್ಲಿದ್ದು, ಸದ್ಯಕ್ಕೆ ಪ್ರತಿ ದಿನ Intermittent ನೀರು ಸರಬರಾಜು ಮಾಡಲಾಗುತ್ತಿದೆ. ಈ ವಾರ್ಡ್‌ಗಳಿಗೂ ನಿರಂತರ ನೀರು ಸರಬರಾಜು ಮಾಡಲು ಕ್ರಮ ವಹಿಸಲಾಗಿದೆ.
ಈ)	ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು ಹಾಗೂ ಇದಕ್ಕೆ ಹೊಣೆಗಾರರು ಯಾರು; ಇವರುಗಳ ವಿರುದ್ಧ ಕೈಗೊಳ್ಳಲಿರುವ ಕ್ರಮಗಳೇನು; ಯಾವಾಗ ನೀರು ಸರಬರಾಜು ಮಾಡಲಾಗುವುದು? (ಪೂರ್ಣ ವಿವರ ಒದಗಿಸುವುದು)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೈಗೊಂಡ ಕಾಮಗಾರಿಗಳು ವಿಳಂಬವಾಗಿರುವುದಿಲ್ಲ. ಈಗಾಗಲೆ ಕೆ.ಯು.ಐ.ಡಿ.ಎಫ್.ಸಿ ಗೆ ವಹಿಸಿರುವ ಬೀದರ್ ನಗರದ ಕಾಮಗಾರಿ ಸಂಪೂರ್ಣಗೊಳಿಸಿ ಯೋಜನೆಯನ್ನು ಚಾಲನೆಗೊಳಿಸಿ ಕಾರಂಜಾ ಜಲಶಯದಿಂದ ನಾಗರೀಕರಿಗೆ ನೀರು ಸರಬರಾಜು ಮಾಡುತ್ತಿರುತ್ತದೆ.

		ಬಸವಕಲ್ಯಾಣ ಪಟ್ಟಣದಲ್ಲಿರುವ 31 ವಾರ್ಡ್‌ಗಳಲ್ಲಿ 16 ವಾರ್ಡ್‌ಗಳಿಗೆ ನಿರಂತರ ನೀರು ಸರಬರಾಜು 15 ವಾರ್ಡ್‌ಗಳಿಗೆ Intermittent ನೀರು ಸರಬರಾಜು ಮಾಡಲಾಗುತ್ತಿದೆ.

ಸಂಖ್ಯೆ ನಅಇ 12 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	ಡಾ॥ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ),
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	130
ಉತ್ತರಿಸಬೇಕಾದ ದಿನಾಂಕ	29-01-2021
ಉತ್ತರಿಸಬೇಕಾದವರು	ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ನಿರ್ಮಾಣ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ.	ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಆ)	ಈ ನಗರಸಭೆಯು ನೂತನವಾಗಿ ಪರಿವರ್ತನೆಗೊಂಡಿದ್ದು, 4 ಗ್ರಾಮ ಪಂಚಾಯಿತಿಗಳು ಸೇರಿ ನಗರ ಸಭಾ ಪ್ರದೇಶವಾಗಿದ್ದು, ಇಲ್ಲಿ Uಉಆ ಒಳಚರಂಡಿ ವ್ಯವಸ್ಥೆ ಇಲ್ಲದೆ ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಸಮಸ್ಯ ಪರಿಹಾರಕ್ಕಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಉದ್ಭವಿಸುವುದಿಲ್ಲ.
ಇ)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೆಲಮಂಗಲ ನಗರಸಭೆಗೆ ಒಳಚರಂಡಿ ನಿರ್ಮಾಣ ಮಾಡಲು ಈ ಆರ್ಥಿಕ ವರ್ಷದ ಆಯವ್ಯಯದಲ್ಲಿ ಅನುದಾನ ನಿಗದಿ ಮಾಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆ;	ಉದ್ಭವಿಸುವುದಿಲ್ಲ.
ಈ)	ರಾಜ್ಯದಲ್ಲಿ ಇದುವರೆವಿಗೂ ಯಾವ ಯಾವ ಪುರಸಭೆ ನಗರಸಭೆ ಪ್ರದೇಶಗಳಲ್ಲಿ UGD ವ್ಯವಸ್ಥೆ ಮಾಡಲಾಗಿದೆ, ಈ ಕಾಮಗಾರಿಗಳಿಗೆ ನಿಗದಿ ಮಾಡಿದ ಅನುದಾನವೇಷ್ಟು? (ವಿವರ ನೀಡುವುದು)	ರಾಜ್ಯದಲ್ಲಿನ ಪುರಸಭೆ ಮತ್ತು ನಗರಸಭೆ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆ ಬಗ್ಗೆ ಹಾಗೂ ಕೈಗೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಸಂಖ್ಯೆ ನಅಇ 16 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಡಾ|| ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ), ಮಾನ್ಯ ವಿಧಾನ ಸಭೆ ಸದಸ್ಯರು
ಪ್ರಶ್ನೆ ಸಂಖ್ಯೆ	:	130
ಸಮೂಹ	:	ಉ ೩
ಉತ್ತರಿಸಬೇಕಾದ ದಿನಾಂಕ	:	29-01-2021
ವಿಷಯ	:	UGD ಕಾಮಗಾರಿಗೆ ಅನುದಾನ ಬಿಡುಗಡೆ
ಉತ್ತರಿಸಬೇಕಾದವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
